ಸಂಪಾದಕರು
ಆನಂದಯ್ಯ ವಿರಕ್ತಮಠ
ಎಂ.ಎ ಪತ್ರಿಕೋದ್ಯಮ
ಎಂ.ಎ ಇಂಗ್ಲೀಷ್ , ಬಿ.ಇಡಿ

Title code: KNKAN/26/A0482

# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES janashreetimes2026@gmail.com KANNADA DAILY MORNING

ಸಂಪುಟ : 01 ಸಂಚಿಕೆ : 05 ದಿನಾಂಕ: 09-06-2026 ಮಂಗಳವಾರ ಪುಟ : 04 ದರ : 4 ರೂ. VOLUME 01 ISSUE: 05 TUESDAY 07-06-2026 PAGE: 04 PRICE : 4/-

## ರಾಜ್ಯಸಭೆ ಚುನಾವಣೆ : 4 ಸ್ಥಾನಗಳಿಗೆ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ಅವಿರೋಧ ಆಯ್ಕೆ ಸಾಧ್ಯತೆ

ಬೆಂಗಳೂರು: ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ 4 ಸದಸ್ಯ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆಗಳಿವೆ.ಕಾಂಗ್ರೆಸ್ ಅಭ್ಯರ್ಥಿಗಳಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರಾ ಹಾಗೂ ಮನ್ಸೂರ್ ಅಲಿ ಖಾನ್ ಹಾಗೂ ಬಿಜೆಪಿ ಅಭ್ಯರ್ಥಿ ಪ್ರೊ.ಎಂ.ನಾಗರಾಜ್ ಅವರು ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ.



ಗೆಲ್ಲಲು ಸಾಧ್ಯವಾಗುವಷ್ಟು ಶಾಸಕರ ಸಂಖ್ಯಾಬಲ ಇಲ್ಲದಿರುವ ಹಿನ್ನೆಲೆಯಲ್ಲಿ ಜೆಡಿಎಸ್ ಈ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಿಲ್ಲ. ಎನ್‌ಡಿಎ ಮೈತ್ರಿಕೂಟದಲ್ಲಿ ಜೆಡಿಎಸ್ ಇರುವುದರಿಂದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನೇ ಬೆಂಬಲಿಸಲಿದೆ. ರಾಜ್ಯಸಭೆ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಕೊಡಗಿನ ಬೋಜಣ್ಣ ಸೋಮಯ್ಯ ಅವರು ಉಮೇದುವಾರಿಕೆ ಸಲ್ಲಿಸಿದ್ದಾರೆ. ಇವರ ನಾಮಪತ್ರಕ್ಕೆ ಸೂಚಕರ ಸಹಿ ಇಲ್ಲದಿರುವ ಹಿನ್ನೆಲೆಯಲ್ಲಿ ಬಹುತೇಕ ತಿರಸ್ಕೃತವಾಗಲಿದೆ. ಹೀಗಾಗಿ ಅಂತಿಮವಾಗಿ ಚುನಾವಣಾ ಕಣದಲ್ಲಿ ಉಳಿಯುವ ಕಾಂಗ್ರೆಸ್‌ನ ಮೂವರು ಹಾಗೂ ಬಿಜೆಪಿಯ ಒಬ್ಬ ಅಭ್ಯರ್ಥಿ ಚುನಾಯಿತರಾಗಲಿದ್ದಾರೆ.

ನಾಳೆ ನಾಮಪತ್ರಗಳ ಪರಿಶೀಲನೆ ನಡೆದು ಸಿಂಧುವಾದ ನಾಮಪತ್ರಗಳನ್ನು ನಾಳೆ ಸಂಜೆ ಪ್ರಕಟಿಸಲಾಗುತ್ತದೆ. ಉಮೇದುವಾ–ರಿಕೆ ವಾಪಸ್ ಪಡೆಯಲು ಜೂ.11ರವರೆಗೆ ಅವಕಾಶವಿದೆ.ಅಂದು ಮಧ್ಯಾಹ್ನ 3 ಗಂಟೆಯ ನಂತರ ಅಂತಿಮವಾಗಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುತ್ತದೆ. ಚುನಾವಣಾ ಕಣಾದಲ್ಲಿ ಕಾಂಗ್ರೆಸ್‌ನ ಮೂವರು, ಬಿಜೆಪಿಯ ಒಬ್ಬ ಉಳಿಯುವುದರಿಂದ ಚುನಾವಣಾ ಕಾರಿ ಅವಿರೋಧವಾಗಿ ಆಯ್ಕೆಯಾಗಿರುವುದನ್ನು ಪ್ರಕಟಿಸಲಿದ್ದಾರೆ.

ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾದ ಇಂದು ಬಿಜೆಪಿ ಅಭ್ಯರ್ಥಿ ಪ್ರೊ .ಎಂ.ನಾಗರಾಜ ಅವರು ಇಂದು ತಮ ಉಮೇದುವಾ–ರಿಕೆಯನ್ನು ಸಲ್ಲಿಸಿದರು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಲ್ಲಿಕಾರ್ಜುನ ಖರ್ಗೆ, ಈರಣ್ಣ ಕಡಾಡಿ, ನಾರಾಯಣ ಕೊರಗಪ್ಪ ಅವರು ರಾಜ್ಯಸಭೆ ಸದಸ್ಯ ಸ್ಥಾನದಿಂದ ಜೂ.25ರಂದು ನಿವೃತ್ತಿಯಾಗಲಿದ್ದಾರೆ. ಇವರ ನಿವೃತ್ತಿಯಿಂದ ತೆರವಾಗುವ ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ನಡೆಯುತ್ತಿದೆ.

## ಜಿ.ಎಸ್. ಪಾಟೀಲರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ದೀಡ ನಮಸ್ಕಾರ

ಗದಗ: ರೋಣ ಕ್ಷೇತ್ರದ ಕಾಂಗ್ರೆಸ್ ಹಿರಿಯ ಶಾಸಕ ಜಿ.ಎಸ್. ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕೆಂದು ಎಂದು ಆಗ್ರಹಿಸಿ ಸಾವಿರಾರು ಸಂಖ್ಯೆಯ ಅಭಿಮಾನಿಗಳು ಗದಗ ನಗರದಲ್ಲಿ ದೀಡ ನಮಸ್ಕಾರ ಹಾಕಿದ್ದಾರೆ.



ನಗರದ ಭೂಮರಡ್ಡಿ ಸರ್ಕಲ್ ನಲ್ಲಿ ಪುಟ್ಟರಾಜ ಗವಾಯಿಗಳ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ವಿಭಿನ್ನ ಹೋರಾಟಕ್ಕೆ ಚಾಲನೆ ನೀಡಲಾಯಿತು. ತಮ್ಮ ನೆಚ್ಚಿನ ನಾಯಕನಿಗೆ ಶೀಘ್ರದಲ್ಲೇ ಮಂತ್ರಿ ಭಾಗ್ಯ ಸಿಗಲಿ ಎಂದು ಕಾರ್ಯಕರ್ತರು ಪ್ರಾರ್ಥಿಸಿದರು. ದೀಡ ನಮಸ್ಕಾರ ಹಾಗೂ ಉರುಳು ಸೇವೆಯು ವೆಂಕಟೇಶ ಚಿತ್ರಮಂದಿರದ ಮುಂಭಾಗದಿಂದ ಸಾಗಿ, ಎಪಿಎಂಸಿ ಮಹಾದ್ವಾರದ ಮೂಲಕ ವೀರೇಶ್ವರ ಪುಣ್ಯಾಶ್ರಮದವರೆಗೆ ತಲುಪಿತು. ಸುಡುವ ಬಿಸಿಲನ್ನು ಲೆಕ್ಕಿಸದೇ ಯುವ ಕಾಂಗ್ರೆಸ್ ಕಾರ್ಯಕರ್ತರು ರಸ್ತೆಯುದ್ದಕ್ಕೂ ಉರುಳು ಸೇವೆ ಮಾಡಿದರು. ಮತ್ತೊಂದೆಡೆ, ವೀರೇಶ್ವರ ಪುಣ್ಯಾಶ್ರಮದ ಮಹಾದ್ವಾರದಿಂದ ನೂರಾರು ಮಹಿಳಾ ಕಾರ್ಯಕರ್ತೆಯರು ಭಕ್ತಿಯಿಂದ ದೀಡ ನಮಸ್ಕಾರ ಹಾಕಿ ಗಮನ ಸೆಳೆದರು. ಈ ಹರಕೆ ಕಾರ್ಯಕ್ರಮದಲ್ಲಿ ರೋಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರೋಣ, ನರೇಗಲ್ಲ, ಗಜೇಂದ್ರಗಡ, ಮುಂಡರಗಿ ಮಂಡಳಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಕ್ರೀಯ ಕಾರ್ಯಕರ್ತರು, ಹಿರಿಯ ಮುಖಂಡರಾದ ವೀರಣ್ಣ ಶೆಟ್ಟರ, ಶರಣಪ್ಪ ಬೆಟಗೇರಿ, ಡಿ.ಡಿ.ಮೋರನಾಳ, ಸಿದ್ದಣ್ಣ ಬಂಡಿ, ಪ್ರಭು ಮೇಟಿ, ಪರಶುರಾಮ ಅಳಗವಾಡಿ, ಗೋಣಿ ಬಸಪ್ಪ ಕೊರ್ಲಹಳ್ಳಿ, ಎಚ್.ಎಸ್.ಸೋಂಪುರ ಮತ್ತು ಜಿ.ಎಸ್. ಪಾಟೀಲರ ಸಾವಿರಾರು ಅಭಿಮಾನಿಗಳು ಭಾಗವಹಿಸಿದ್ದರು. ಪುಟ್ಟರಾಜರ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ ದೀಡ ನಮಸ್ಕಾರ ಮತ್ತು ಉರುಳು ಸೇವೆಯ ನಂತರ ವೀರೇಶ್ವರ ಪುಣ್ಯಾಶ್ರಮದ ಸಭಾಂಗಣದಲ್ಲಿ ಡಾ. ಪುಟ್ಟರಾಜ ಗವಾಯಿಗಳ ಪವಿತ್ರ ಗದ್ದುಗೆಗೆ ವಿಶೇಷ ಅಭಿಷೇಕ ಮತ್ತು ಮಹಾಪೂಜೆಯನ್ನು ನೆರವೇರಿಸಲಾಯಿತು. ನಮ್ಮ ನಾಯಕರಿಗೆ ಸಚಿವ ಸ್ಥಾನ ಸಿಗುವವರೆಗೂ ನಾವು ವಿಶ್ರಮಿಸುವುದಿಲ್ಲ, ಅವರ ಹಿರಿತನ ಹಾಗೂ ಅನುಭವಕ್ಕೆ ಹೈಕಮಾಂಡ್ ಸೂಕ್ತ ಗೌರವ ನೀಡಬೇಕು ಎಂದು ಭಕ್ತರು ಗದ್ದುಗೆಯ ಮುಂದೆ ಪ್ರಾರ್ಥಿಸಿ ಹರಕೆ ಕಟ್ಟಿಕೊಂಡರು.

## ಜೂನ್.15 ರಂದು ತಾಲೂಕು ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ

ಗದಗ: ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ಅವರ ಅಧ್ಯಕ್ಷತೆಯಲ್ಲಿ ಜೂನ್ 15 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ವಿ.ಸಿ. ಹಾಲ್ ದಲ್ಲಿ ಗದಗ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಗದಗ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಜನಶ್ರೀ ಟೈಮ್ಸ್**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

## ಸಂಗನಾಳ ಅನ್ನದಾನೇಶ್ವರ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ

ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಕೊಪ್ಪಳ ಹಾಗೂ ಶ್ರೀ ಅನ್ನದಾನೇಶ್ವರ ಸರ್ಕಾರಿ ಪ್ರೌಢಶಾಲೆ, ಸಂಗನಾಳ ಇವರುಗಳ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ (ಜೂ. 4ರಂದು) "ವಿಶ್ವ ತಂಬಾಕು ರಹಿತ ದಿನಾಚರಣೆ" ಜಾಗೃತಿ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶಿವಾನಂದ ವಿ.ಪಿ ಅವರು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಹಾಗೂ ಸಾಂಕ್ರಾಮಿಕ ರೋಗಗಳು ಮತ್ತು ಅಸಾಂಕ್ರಾಮಿಕ ರೋಗಗಳ ಬಗ್ಗೆ ಸಂಪೂರ್ಣವಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರರಾದ ಸಂಗಪ್ಪ ಮಮಟಗೇರಿ ಅವರು ಕಾರ್ಯಕ್ರಮದ ಕುರಿತು ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಕೂಡ "ಆಕರ್ಷಣೆಯನ್ನು ಬಹಿರಂಗಪಡಿಸುವುದು–ನಿಕೋಟಿನ್ ಮತ್ತು ತಂಬಾಕು ವ್ಯಸನವನ್ನು ಎದುರಿಸುವುದು" ಎಂಬ ಘೋಷವಾಕ್ಯದೊಂದಿಗೆ ಮೇ 31 ರಂದು "ವಿಶ್ವ ತಂಬಾಕು ರಹಿತ ದಿನಾಚರಣೆ" ಕಾರ್ಯಕ್ರಮ ಆಚರಿಸಲಾಗುತ್ತಿದೆ. ಡಬ್ಲ್ಯೂ.ಹೆಚ್.ಓ ಪ್ರಕಾರ ತಂಬಾಕು ಮತ್ತು ನಿಕೋಟಿನ್ ಉದ್ಯಮವು ಯುವಕರನ್ನು ಗುರಿಯಾಗಿಸಲು ಸುವಾಸನೆ, ವರ್ಣರಂಜಿತ ಪ್ಯಾಕೇಜಿಂಗ್ ಮತ್ತು ಸಾಮಾಜಿಕ ಮಾಧ್ಯಮವನ್ನು ಹೇಗೆ ಬಳಸುತ್ತದೆ ಎಂಬುವದನ್ನು ಬಹಿರಂಗಪಡಿಸುವುದು ಈ ಘೋಷವಾಕ್ಯದ ಉದ್ದೇಶವಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಿದರೆ ಕೊಟ್ಪಾ–2003ರ ಕಾಯ್ದೆಯ ಪ್ರಕಾರ, ದಂಡ ಮತ್ತು ಶಿಕ್ಷೆ ವಿಧಿಸಲಾಗುತ್ತದೆ ಮತ್ತು ಸೆಕ್ಷನ್: 6ಬಿ ಪ್ರಕಾರ ಶೈಕ್ಷಣಿಕ ಸಂಸ್ಥೆಗಳ 100 ಮೀಟ–




ರ್ ವ್ಯಾಪ್ತಿಯಲ್ಲಿ ಯಾವುದೇ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧ ಎಂದು ತಿಳಿದರು.

ದಿಹರೆಯದವರ ಆರೋಗ್ಯ ಸಮಸ್ಯೆಗಳು ಮತ್ತು ಪರಿಹಾರ ಕುರಿತು ತಿಳಿಸಿದರು ಹಾಗೂ ತಂಬಾಕು ಸೇವನೆಯಿಂದ ದೂರವಿದ್ದು ಯುವಕರು ಜಾಗೃತರಾಗಿ ತಮ್ಮ ವಿದ್ಯಾಭ್ಯಾಸ ಮತ್ತು ಉತ್ತಮ ಜೀವನದ ಕಡೆಗೆ ಹೆಚ್ಚು ಗಮನ ಹರಿಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೆ ತಮ್ಮ ಮನೆ, ಶಾಲಾ, ಕಾಲೇಜುಗಳನ್ನು ತಂಬಾಕು ಮುಕ್ತ ಮಾಡುವುದರಲ್ಲಿ ತಮ್ಮದು ಪ್ರಮುಖ ಪಾತ್ರ ಇರುತ್ತದೆ. ಹಾಗಾಗಿ ನಮ್ಮ ದೇಶವನ್ನು ತಂಬಾಕು ಮುಕ್ತವನ್ನಾಗಿಸಲು ಸಾಧ್ಯ ಹಾಗೂ ವಿದ್ಯಾರ್ಥಿಗಳಿಗೆ "ಉತ್ತಮ ಜೀವನವನ್ನು ಆಯ್ದುಕೊಳ್ಳಿ ತಂಬಾಕನ್ನಲ್ಲ" ಎಂದು ಮತ್ತು ಒಳ್ಳೆಯ ಆರೋಗ್ಯಕರ ಅಭ್ಯಾಸಗಳನ್ನು ರೂಡಿಸಿಕೊಂಡು ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡೋಣ ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖೋಪಾದ್ಯಯರು ಹಾಗೂ ಎಲ್ಲಾ ಶಾಲೆಯ ಸಿಬ್ಬಂದಿ ವರ್ಗದವರು ಮತ್ತು ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನೇರ ಸಂದರ್ಶನ

ಗದಗ: ಜಿಲ್ಲೆಯ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ವತಿಯಿಂದ ಜೂನ್ 11 ರಂದು ಗುರುವಾರ ರಂದು ಬೆಳಿಗ್ಗೆ 10–00 ಗಂಟೆಗೆ ನಗರದ ವಿವೇಕಾನಂದ ನಗರ 4ನೇ ಅಡ್ಡ ರಸ್ತೇ ಸಾಯಿ ಬಾಬಾ ದೇವಸ್ಥಾನ ಹಿಂದುಗಡೆ ಕೆ.ಎಚ್.ಬಿ ಕಾಲೋನಿ, ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ನೇರ ಸಂದರ್ಶನದಲ್ಲಿ ಸ್ವತಂತ್ರ ಮೈಕ್ರೋಪಿನ್ ಪ್ರೈವೇಟ್ ಲಿಮಿಟೆಡ, ಕಂಪನಿಗಳು ಭಾಗವಹಿಸಲಿವೆ. ಎಸ್. ಎಸ್.ಎಲ್.ಸಿ, ಪಿ,ಯು.ಸಿ, ಐಟಿಐ ಮತ್ತು ಯಾವುದೆ ಪದವಿ ಹೊಂದಿರಬೇಕು. 18 ರಿಂದ 30 ವಯಸಿನಲ್ಲಿರಬೇಕು. ಶಿರಹಟ್ಟಿ, ಮುಂಡರಗಿ, ಗದಗ, ಅಣ್ಣಿಗೇರಿ, ರೋಣ, ಗಜೇಂದ್ರಗಡದಲ್ಲಿ ಹುದ್ದೆಗಳು ಖಾಲಿ ಇವೆ. ಕಡ್ಡಾಯವಾಗಿ ಚಾಲನಾ ಪರವಾನಗಿ ಹಾಗೂ ದ್ವಿಚಕ್ರ ವಾಹನ ಹೊಂದಿರಬೇಕು.

ನೇರ ಸಂದರ್ಶನದಲ್ಲಿ ಪಾಲ್ಗೊಳುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ಝರಾಕ್ಸ್ ಪ್ರತಿಗಳು, 2 ರೆಸ್ಯೂಮ್(ಬಯೋಡಾಟಾ)ಪ್ರತಿಗಳು, ಮತ್ತು ಆದ–ಾರ ಕಾರ್ಡ್ ಝರಾಕ್ಸ್ ನೊಂದಿಗೆ ಭಾಗವಹಿಸಬಹುದು. ನೇರ ಸಂದರ್ಶನದಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿರುತ್ತದೆ. ಹಾಗೂ ಯುವನಿಧಿ ಯೋಜನೇಯ ಫಲಾನುಭವಿಗಳು ಈ ನೇರ ಸಂದರ್ಶನದಲ್ಲಿ ಕಡ್ಡಾಯವಾಗಿ ಪಾಲ್ಗೋಳಬೇಕು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 8951460061,6363330688 ಕ್ಕೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿಯಾದ ಬಸವಂತ ಪಿ ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉನ್ನತ ಸಾಧನೆ ಮಾಡಿದವರನ್ನು ಸ್ಫೂರ್ತಿಯಾಗಿ ತೆಗೆದುಕೊಳ್ಳಿ : ಚೈತನ್ಯಾನಂದ ಸ್ವಾಮೀಜಿ

ಕೊಪ್ಪಳ: ಉನ್ನತ ಸಾಧನೆ ಮಾಡಿದವರನ್ನು ಸ್ಫೂರ್ತಿ ಮತ್ತು ಮಾದರಿಯಾಗಿ ತೆಗೆದುಕೊಳ್ಳಬೇಕು ಎಂದು ಕೊಪ್ಪಳದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಚೈತನ್ಯಾನಂದ ಸ್ವಾಮೀಜಿ ಅವರು ಹೇಳಿದರು.



ತಾಲ್ಲೂಕಿನ ಗೊಂಡಬಾಳ ಗ್ರಾಮದಲ್ಲಿ ಮಂಗಳವಾರದಂದು ಕೊಪ್ಪಳದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಿಂದ ಆಯೋಜಿಸಿದ ರಾಷ್ಟ್ರೀಯ ಸೇವಾ ಯೋಜನೆ –2025–26 ಸಾಲಿನ ವಾರ್ಷಿಕ ವಿಶೇಷ ಶಿಬಿರ ಉದ್ಘಾಟನೆ ಮಾಡಿ ಅವರು ಮಾತನಾಡಿದರು. ಒಳ್ಳೆಯ ಚಿಂತನೆ ಮತ್ತು ಉತ್ತಮ ಅರೋಗ್ಯ ಇದ್ದರೆ ಎಲ್ಲ ಸಮಸ್ಯೆಗಳು ಪರಿಹಾರ ಆಗುತ್ತವೆ. ಎಲ್ಲರಲ್ಲೂ ಬಹಳಷ್ಟು ಶಕ್ತಿ ಇದೆ. ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಅವಕಾಶಗಳು ಬಹಳಷ್ಟು ಇವೆ. ಅವುಗಳನ್ನು ಉಪಯೋಗ ಮಾಡಿಕೊಳ್ಳಬೇಕು. ಯಾವುದೇ ಕೆಲಸದಲ್ಲಿ ಶ್ರದ್ದೆ ಮತ್ತು ಅಧ್ಯಯನ ಬೇಕು. ಯಶಸ್ವಿ ಅನ್ನುವುದು ಅಂತಿಮ ಘಟ್ಟ ಅಲ್ಲ. ಅದು ಕೇವಲ ಸಂತೋಷ ಅಷ್ಟೇ. ಮನೋರಂಜನೆ ಸೀಮಿತವಾಗಿರಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿರುವ ಬಿ. ಜಿ ಕ–ರಿಗಾರ ಅವರು ಮಾತನಾಡುತ್ತ ಗ್ರಾಮಗಳ ನೈರ್ಮಲ್ಯವನ್ನು ಕಾಪಾಡಿಕೊಳ್ಳಬೇಕು. ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಸೇವೆ ಮನೋಭಾವನೆ ಇರಬೇಕು. ಸ್ವಚ್ಛತೆ ಕುರಿತು ಗ್ರಾಮಗಳಲ್ಲಿ ಅರಿವು ಮೂಡಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ. ಗಣಪತಿ ಲಮಾಣಿ ಅವರು ಮಾತನಾಡುತ್ತ ವಿದ್ಯಾರ್ಥಿಗಳು ತಮ್ಮ ಮನೆ ಮತ್ತು ಗ್ರಾಮಗಳನ್ನು ಸ್ವಚ್ಛತೆ ಕಾಪಾಡಿಕೊಳ್ಳಬೇಕು. ನೀವು ಕಠಿಣ ಪರಿಶ್ರಮ ಪಟ್ಟರೆ ಯಶಸ್ವಿ ಖಂಡಿತ ಸಿಗುತ್ತದೆ. ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ. ನಾವು ನಿಜವಾದ ಭಾರತವನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ಹಳ್ಳಿಗಳಿಗೆ ಹೋಗಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಮಲ್ಲಿಕಾರ್ಜುನ, ಡಾ. ಪ್ರದೀಪ್ ಕುಮಾರ ಮಾತನಾಡಿದರು. ಕಾರ್ಯಕ್ರಮದಲ್ಲಿ ಗೊಂಡಬಾಳ ಗ್ರಾಮದ ಮುಖಂಡರಾದ ಸೋಮಶೇಖರಯ್ಯ ವಿರೂಪಾಕ್ಷಯ್ಯ ಇನಾಮದಾರ, ಅದಪ್ಪ ಹಳ್ಳಕೆರಿ, ಬಸಣ್ಣ ಕೋಣಿ, ಕಾಲೇಜಿನ ಉಪನ್ಯಾಸಕರಾದ ಡಾ. ನರಸಿಂಹ, ಶಿವಪ್ರಸಾದ್ ಹಾದಿಮನಿ, ವೀರುಪಾಕ್ಷಿ ಮುತ್ತಾಳ, ಶ್ರೀಕಾಂತ್, ಸಂಗಪ್ಪ ಬ್ಯಾಳಿ ಹಾಗೂ ಇತರರು ಉಪಸ್ಥಿತ–ರಿದ್ದರು. ಕಾರ್ಯಕ್ರಮವನ್ನು ಶಾಹಿನ್ ನಿರೂಪಿಸಿದರು. ಭಾಗ್ಯಮ್ಮ ಸ್ವಾಗತಿಸಿದರು. ಭಾನು ಬೇಗಂ ವಂದಿಸಿದರು.

## ಡಾ. ಎಚ್.ಕೆ ಪಾಟೀಲ ಕಳಂಕರಹಿತ ರಾಜಕಾರಣ ಮಾಡಿದ್ದಾರೆ : ಚಂದ್ರು ಕಾಳೆ

ಗದಗ: ಮಾಜಿ ಸಚಿವ ಡಾ. ಎಚ್.ಕೆ ಪಾಟೀಲರು ಕಳಂಕರಹಿತವಾಗಿ ಸುದೀರ್ಘ ರಾಜಕಾರಣ ಮಾಡಿದ್ದಾರೆ. ಅಂತವರನ್ನು ಮೊದಲ ಹಂತದ ಸಚಿವ ಸಂಪುಟದಿಂದ ಕೈಬಿಟ್ಟಿದ್ದು ಸರಿಯಲ್ಲ. ಕೂಡಲೇ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಗದಗ–ಬೆಟಗೇರಿ ಪರಿಶಿಷ್ಠ ಪಂಗಡದ ಅಧ್ಯಕ್ಷ ಚಂದ್ರು ಕಾಳೆ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿನ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜೂನ್ 16ಕ್ಕೆ ಗದಗದಲ್ಲಿ ಬೃಹತ್ ಹೋರಾಟ ಹಮ್ಮಿಕೊಂಡಿದ್ದೇವೆ. 19 ಕ್ಕೆ ಗದಗದಿಂದ ಬೆಂಗಳೂರಿಗೆ ತೆರಳಿ ಹೋರಾಟ ಮಾಡುತ್ತೇವೆ. ಕೆ.ಪಿ.ಸಿ.ಸಿ ಅಧ್ಯಕ್ಷರಿಗೆ ಹಾಗೂ ಎ.ಐ.ಸಿ.ಸಿ ವಕ್ತಾರರಿಗೆ ಸಚಿವ ಸ್ಥಾನ ನೀಡುವಂತೆ




ಮನವಿ ಸಲ್ಲಿಸಲಿದ್ದೇವೆ ಎಂದರು.

ಡಾ. ಎಚ್.ಕೆ ಪಾಟೀಲರಿಗೆ ಸುದೀರ್ಘ 50 ವರ್ಷದ ರಾಜಕಾರಣದ ಅನುಭವವಿದೆ. ಅವರು ಮುಖ್ಯಮಂತ್ರಿ ಆಗುವ ಎಲ್ಲ ಲಕ್ಷಣ ಹೊಂದಿದ್ದಾರೆ ಎಂದು ಭಾವಿಸಲಾಗಿತ್ತು. ಆದರೆ, ಮೊದಲ ಹಂತದ ಸಚಿವ ಸಂಪುಟದಲ್ಲಿ ಸ್ಥಾನ ನೀಡದಿರುವುದು ಸಮಂಜಸವಲ್ಲ ಎಂದರು. ಮೊದಲ ಹಂತದಲ್ಲಿ ಕೈಬಿಟ್ಟಿದ್ದು, ಎರಡನೇ ಹಂತದಲ್ಲಾದರೂ ಮಂತ್ರಿಸ್ಥಾನ ನೀಡಬೇಕು. ಇಲ್ಲದಿದ್ದರೆ, ಪರಿಶಿಷ್ಟ ಪಂಗಡದ ಎಲ್ಲ ವಿಭಾಗಗಳಿಗೆ ನಾವು ಸಾಮೂಹಿಕ ರಾಜೀನಾಮೆ ನೀಡುತ್ತೇವೆ ಎಂದು ಕಾಂಗ್ರೆಸ್ ಹೈಕಮಾಂಡಗೆ ಎಚ್ಚರಿಕೆ ನೀಡಿದರು.

ಗದಗ–ಬೆಟಗೇರಿ ಪರಿಶಿಷ್ಟ ಪಂಗಡದ ಉಪಾಧ್ಯಕ್ಷ ಹೊನ್ನಪ್ಪ ಸಾಕಿ ಮಾತನಾಡಿ, ಎಚ್. ಕೆ ಪಾಟೀಲರ ಅನುಭವ ಹಾಗೂ ಹಿರಿತನಕ್ಕೆ ಬೆಲೆ ನೀಡಿ ಸಚಿವ ಸ್ಥಾನ ನೀಡಬೇಕಿತ್ತು. ಅವರು ಗದಗ ಮತಕ್ಷೇತ್ರ ಸೇರಿದಂತೆ ರಾಜ್ಯಕ್ಕೆ ಅನೇಕ ಕೊಡುಗೆ ನೀಡಿದ್ದಾರೆ. ಕುತಂತ್ರದಿಂದ ಅವರನ್ನು ಸಚಿವ ಸಂಪುಟದಿಂದ ಕೈಬಿಟ್ಟಿರುವ ಅನುಮಾನವಿದೆ ಎಂದರು.

ಈ ವೇಳೆ ಮಂಜುನಾಥ ಸಿಂಗಾಡಿ, ಮಲ್ಲಿಕಾರ್ಜುನ ಸಂಗಾಪೂರ, ಗುರುರಾಜ್ ಸಂಕಣ್ಣನವರ, ಆರ್. ಎಲ್ ಮೇಣಲ್ಲನವರ, ಯಲ್ಲಪ್ಪ ಒಂಟೆತ್ತಿನ, ಗಂಗಾಧರ ವಾಲಿಕಾರ, ಗಣೇಶ ಕಟಗಿ, ಈರಣ್ಣ ಗೆಜ್ಜಿಹಳ್ಳಿ, ಲಕ್ಷ್ಮಣ ವಡ್ಡರಕಲ್ಲ ಉಪಸ್ಥಿತರಿದ್ದರು.

## ಪ್ಲಾಸ್ಟಿಕ್ ನೋಟುಗಳನ್ನು ಪರಿಚಯಿಸಲು ಆರ್‌ಬಿಐ ಚಿಂತನೆ




ಮುಂಬೈ: ಶೀಘ್ರದಲ್ಲೇ ದೇಶದ ಪಾಲಿಮರ್ ಇಲ್ಲವೇ ಪ್ಲಾಸ್ಟಿಕ್ ನೋಟುಗಳ ಚಲಾವಣೆಗೆ ಬರುವ ಸಾಧ್ಯತೆಗಳಿವೆ.ಪ್ಲಾಸ್ಟಿಕ್ ನೋಟುಗಳನ್ನು ದೇಶದ ಜನರಿಗೆ ಪರಿಚಯಿಸುವ ಪ್ರಸ್ತಾಪವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಪರಿಗಣಿಸಿದೆ ಎಂದು ತಿಳಿದುಬಂದಿದೆ.

ಪಾಲಿಮರ್ ನೋಟುಗಳನ್ನ ಜಾರಿಗೊಳಿಸಲು ನಾವು ಚಿಂತನೆ ನಡೆಸುತ್ತಿದ್ದೇವೆ. ಇದರ ಸಾಧಕ ಬಾಧಕಗಳ ಬಗ್ಗೆ ನಾವು ಪರಿಶೀಲನೆ ನಡೆಸುತ್ತಿದ್ದೇವೆ. ಈ ಪ್ರಸ್ತಾಪವು ಸದ್ಯ ಪ್ರಾಥಮಿಕ ಹಂತದಲ್ಲಿದ್ದು, ಯಾವುದೇ ಅಂತಿಮ ನಿರ್ಧಾರ ಕೈಗೊಂಡಿಲ್ಲ. ನಿರ್ಧಾರ ತೆಗೆದುಕೊಂಡ ಬಳಿಕ ಅಧಿಕೃತ ಮಾಹಿತಿ ನೀಡುತ್ತೇವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸ್ಪಷ್ಟನೆ ನೀಡಿದ್ದಾರೆ. ಏನಿದು ಪಾಲಿಮರ್ ನೋಟು?ನಾವು ದಿನನಿತ್ಯ ಬಳಸುವ ಕಾಗದದ ನೋಟುಗಳಿಗಿಂತ ಇವು ಸಂಪೂರ್ಣ ಭಿನ್ನ. ತೆಳುವಾದ, ಸುಲಭವಾಗಿ ಮಡಚಬಹುದಾದ ಮತ್ತು ದೀರ್ಘಕಾಲಿಕ ಬಾಳಿಕೆ ಬರುವ ನೋಟುಗಳು. ಕಾಗದದ ನೋಟುಗಳ ಮುದ್ರಣದ ವೆಚ್ಚ ತೀವ್ರವಾಗಿ ಹೆಚ್ಚಳವಾಗುತ್ತಿರುವುದರಿಂದ ಮತ್ತು ಪ್ರತಿ ವರ್ಷ ಹರಿದ ನೋಟುಗಳನ್ನ ಚಲಾವಣೆಯಿಂದ ಹಿಂಪಡೆಯುತ್ತಿರುವುದನ್ನು ತಡೆಯಲು ಆರ್‌ಬಿಐ ಈ ಪ್ರಮುಖ ನಿರ್ಧಾರ ಕೈಗೊಳ್ಳಲು ಮುಂದಾಗಿದೆ ಎನ್ನಲಾಗಿದೆ. ಪ್ಲಾಸ್ಟಿಕ್ ನೋಟುಗಳ ಪರಿಚಯ ಭಾರತಕ್ಕೆ ಹೊಸದೇನಲ್ಲ. 2014ರಲ್ಲೇ ಕೇಂದ್ರ ಸರ್ಕಾರವು ದೇಶದ ವಿವಿಧೆಡೆ ಈ ಪ್ರಯೋಗ ನಡೆಸಿತ್ತು. ದೇಶದ 5 ಪ್ರಮುಖ ನಗರಗಳಾದ ಮೈಸೂರು, ಕೊಚ್ಚಿ, ಜೈಪುರ, ಶಿಮ್ಲಾ ಮತ್ತು ಭುವನೇಶ್ವರಗಳಲ್ಲಿ ಪ್ರಾಯೋಗಿಕವಾಗಿ 10 ರೂ. ಮುಖಬೆಲೆಯ 100 ಕೋಟಿ ಪ್ಲಾಸ್ಟಿಕ್ ನೋಟುಗಳನ್ನು ಚಲಾವಣೆಗೆ ತರಲಾಗುವುದು ಎಂದು ಸರ್ಕಾರ ಸಂಸತ್ತಿಗೆ ತಿಳಿಸಿತ್ತು.ಪ್ರಸ್ತುತ ಆರ್‌ಬಿಐ ಈ ಯೋಜನೆಯನ್ನು ದೇಶಾದ್ಯಂತ ಜಾರಿಗೆಗೊಳಿಸಲು ಚಿಂತನೆ ನಡೆಸುತ್ತಿದ್ದು, ಮುಂದಿನ ದಿನಗಳಲ್ಲಿ ನಮ್ಮ ಕೈಗೆ ಕಾಗದದ ನೋಟುಗಳ ಬದಲು ಪ್ಲಾಸ್ಟಿಕ್ ನೋಟುಗಳು ಬಂದರೂ ಅಚ್ಚರಿಪಡಬೇಕಾಗಿಲ್ಲ.

## ಹೆತ್ತ ಮಗಳನ್ನೇ ಕೊಂದು ಕಥೆಕಟ್ಟಿದ್ದ ತಾಯಿ ಪರಾರಿ, ಪ್ರಿಯಕರನ ಬಂಧನ



ಬೆಂಗಳೂರು: ಮೂರು ತಿಂಗಳ ಹಿಂದೆ ಅನುಮಾನಾಸ್ಪದವಾಗಿ ಆರು ವರ್ಷದ ಬಾಲಕಿ ಮೃತಪಟ್ಟಿದ್ದ ಪ್ರಕರಣವನ್ನು ಭೇದಿಸಿರುವ ಕಾಡುಗೋಡಿ ಠಾಣೆ ಪೊಲೀಸರು ಬಾಲಕಿ ತಾಯಿಯ ಪ್ರಿಯಕರನನ್ನು ಬಂಧಿಸಿದ್ದಾರೆ.ಆರು ವರ್ಷದ ಬಾಲಕಿ ವೆನಿಲಾಳನ್ನು ಕೊಲೆ ಮಾಡಲಾಗಿದೆ ಎಂದು ಅನುಮಾನ ವ್ಯಕ್ತಪಡಿಸಿ ತಂದೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಬಾಲಕಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುವುದು ಮರಣೋತ್ತರ ಪರೀಕ್ಷೆ ವರದಿಯಿಂದ ಬೆಳಕಿಗೆ ಬಂದಿದ್ದು, ಈ ಆಧಾರದ ಮೇಲೆ ತನಿಖೆ ಚುರುಕುಗೊಳಿಸಿ ಇದೀಗ ಆರೋಪಿ ಮೋಹನ ಎಂಬಾತನನ್ನು ಬಂಧಿಸಿದ್ದಾರೆ.17 ವರ್ಷದ ಹಿಂದೆ ದಾವಣಗೆರೆಯ ಪ್ರವೀಣ ಹಾಗೂ ಪ್ರಿಯಾಂಕ ಮದುವೆಯಾಗಿದ್ದು, ದಂಪತಿಗೆ ಮಕ್ಕಳಿದ್ದು, ಕಾಡುಗೋಡಿಯಲ್ಲಿ ವಾಸವಾಗಿದ್ದರು. ಈ ನಡುವೆ ಪ್ರಿಯಾಂಕಾ ತನ್ನ ಶಾಲಾ ಸಹಪಾಠಿ ಮೋಹನ ಜೊತೆ ಸಂಪರ್ಕದಲ್ಲಿದ್ದಳು. ಇವರಿಬ್ಬರ ನಡುವೆ ಸಲುಗೆ ಬೆಳೆದಿತ್ತು. ಮೋಹನ ಆಗಾಗ್ಗೆ ಮನೆಗೆ ಬಂದು ಹೋಗುತ್ತದ್ದನು.ಈ ವಿಚಾರ ಪತಿ ಪ್ರವೀಣನಿಗೆ ಗೊತ್ತಾಗಿದೆ. ಈ ಬಗ್ಗೆ ಪತ್ನಿಯನ್ನು ಪ್ರಶ್ನಿಸಿದಾಗ ದಂಪತಿ ನಡುವೆ ಜಗಳವಾಗಿದ್ದು, ತನಗೆ ವಿಚ್ಛೇದನ ನೀಡುವಂತೆ ಪಟ್ಟು ಹಿಡಿದ ಪ್ರಿಯಾಂಕಾ ತನ್ನ ಆರು ವರ್ಷದ ಮಗಳು ವೆನಿಲಾಳನ್ನು ಜೊತೆಯಲ್ಲಿ ಕರೆದುಕೊಂಡು ಮನೆ ಬಿಟ್ಟು ಹೋಗಿ ಪ್ರಿಯಕರ ಪ್ರವೀಣನ ಜೊತೆ ಲಿವಿಂಗ್ ರಿಲೇಷನ್‌ನಲ್ಲಿದ್ದಳು.ಈ ನಡುವೆ ಮಾ.24 ರಂದು 6 ವರ್ಷದ ಮಗಳು ವೆನಿಲಾ ಸಾವನ್ನಪ್ಪಿದ್ದು, ಈ ಬಗ್ಗೆ ಪತಿ ವಿಚಾರಿಸಿದಾಗ ಮಗುವಿಗೆ ಬಿರಿಯಾನಿ ಮತ್ತು ಐಸ್‌ಕ್ರೀಮ್ ತಿನ್ನಿಸಿ ಎಸಿ ಕಾರಿನಲ್ಲಿ ಮಲಗಿಸಿದ್ದಾಗ ಮೃತಪಟ್ಟಿದ್ದಾಳೆಂದು ಕತೆ ಕಟ್ಟಿದ್ದಾಳೆ. ಮಗಳ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಪ್ರವೀಣ್ ಕಾಡುಗೋಡಿ ಪೊಲೀಸ-ರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಈ ಮಗುವನ್ನು ತಾಯಿಯೇ ತನ್ನ ಪ್ರಿಯಕರನ ಜೊತೆ ಸೇರಿಕೊಂಡು ಉಸಿರುಗಟ್ಟಿಸಿ ಕೊಲೆ ಮಾಡಿರುವುದು ಬೆಳಕಿಗೆ ಬಂದಿದೆ.ತಾಯಿ ಪ್ರಿಯಾಂಕಾ ತಲೆಮರೆಸಿಕೊಂಡಿದ್ದು, ಪೊಲೀಸರು ಶೋಧ ಕಾರ್ಯ ಮುಂದುವರೆಸಿದ್ದಾರೆ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೇ ಓದಿರಿ.

# ರಾಮಲಿಂಗಾರೆಡ್ಡಿ ರೆಡ್ಡಿ, ಮುನಿಯಪ್ಪ ಬಳಿಕ ಈಗ ಸತೀಶ್ ಜಾರಕಿಹೊಳಿ ತಗಾದೆ



ಬೆಂಗಳೂರು: ಖಾತೆಗಾಗಿ ರಾಮಲಿಂಗಾರೆಡ್ಡಿ, ಕೆ.ಎಚ್.ಮುನಿಯಪ್ಪ ಅವರ ತಗಾದೆ ಬಳಿಕ ಮತ್ತೊಬ್ಬ ಸಚಿವರು ಸಿಡಿಮಿಡಿಗೊಳ್ಳುತ್ತಿದ್ದು, ಸಮಾಜ ಕಲ್ಯಾಣ ಖಾತೆಗಾಗಿ ಪಟ್ಟುಹಿಡಿದಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರಮಾಪ್ತರಾಗಿರುವ ಸತೀಶ್ ಜಾರಕಿಹೊಳಿ ಲೋಕೋಪಯೋಗಿ ಖಾತೆ ಜೊತೆಗೆ ಅಥವಾ ಬದಲಾಗಿ ಸಮಾಜಕಲ್ಯಾಣ ಖಾತೆ ನೀಡುವಂತೆ ಒತ್ತಡ ಹೇರಿದ್ದು, ಕಾಂಗ್ರೆಸ್‌ಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ಸಮಾಜ ಕಲ್ಯಾಣ ಖಾತೆಯ ಮೇಲೆ ಸಚಿವ ಕೆ.ಎಚ್. ಮುನಿಯಪ್ಪ ಕೂಡ ಕಣ್ಣಿಟ್ಟಿದ್ದಾರೆ. ನಮಗೂ ಅದೇ ಖಾತೆ ಬೇಕೆಂದು ಸತೀಶ್ ಜಾರಕಿಹೊಳಿ, ಹೈಕಮಾಂಡ್ ಅವರ ಮುಂದೆ ವಕಾಲತ್ತು ಹಾಕಿರುವುದಾಗಿ ಮೂಲಗಳು ತಿಳಿಸಿವೆ. ಸಮಾಜ ಕಲ್ಯಾಣ ಇಲಾಖೆ ಕರ್ನಾಟಕದಲ್ಲಿ ಅತ್ಯಂತ ಪ್ರಭಾವಿ ಖಾತೆಯಾಗಿದೆ. ಸುಮಾರು 42 ಸಾವಿರ ಕೋಟಿ ರೂ.ಗಳಷ್ಟು ಅನುದಾನ ಬೇರೆ ಬೇರೆ ಇಲಾಖೆಗಳ ಮೂಲಕ ಖರ್ಚಾಗುತ್ತಿದೆ. ಎಸ್‌ಇಪಿ-ಟಿಎಸ್‌ಪಿ ಹಿನ್ನೆಲೆಯಲ್ಲಿ ಶೋಷಿತ ಸಮುದಾಯಗಳ ಅಭಿವೃದ್ಧಿಗೆ ಹೆಚ್ಚಿನ ಹಣ-ಕಾಸು ನೆರವು ದೊರೆಯುತ್ತಿದೆ. ಜೊತೆಗೆ ಅತ್ಯಂತ ಪ್ರಭಾವ ಶಾಲಿಯಾಗಿ ಕೆಲಸ ಮಾಡಲು ಅವಕಾಶಗಳಿವೆ. ಇದಕ್ಕಾಗಿಯೇ ಕೆ.ಎಚ್. ಮುನಿಯಪ್ಪ ಸೇರಿದಂತೆ ಹಲವಾರು ಮಂದಿ ಸಮಾಜ ಕಲ್ಯಾಣ ಇಲಾಖೆ ಮೇಲೆ ಕಣ್ಣಿಟ್ಟಿದ್ದಾರೆ. ಸಂಪುಟದಲ್ಲಿ ಇನ್ನೂ 20 ಸ್ಥಾನಗಳು ಖಾಲಿಯಿದ್ದು, ವಿಸ್ತರಣೆಯ ಬಳಿಕ ಸಂಪುಟ ಸೇರಲಿರುವ ಪ್ರಭಾವಿಯೊಬ್ಬರಿಗೆ ಸಮಾಜ ಕಲ್ಯಾಣ ಖಾತೆ ನೀಡಲು ಕಾಯ್ದಿರಿಸಲಾಗಿದೆ. ಆದರೆ ಇದನ್ನು ಒಪ್ಪದ ಸತೀಶ್ ಜಾರಕಿಹೊಳಿ, ಕೆ.ಎಚ್.ಮುನಿಯಪ್ಪ ಮತ್ತಿತರರು ಶೋಷಿತ ಸಮುದಾಯದ ಹಿನ್ನೆಲೆಯಿಂದ ಬಂದವರಿಗೆ ಖಾತೆ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ. ಈವರೆಗೂ ಬಹಿರಂಗವಾಗಿ ಎಲ್ಲಿಯೂ ಹೇಳಿಕೆ ನೀಡದ ಸತೀಶ್ ಜಾರಕಿಹೊಳಿ, ಆಂತರಿಕವಾಗಿ ವರಿಷ್ಠರನ್ನು ಭೇಟಿ ಮಾಡಿ ತಮ ಒತ್ತಾಯ ಮಂಡಿಸಿರುವುದಾಗಿ ಮೂಲಗಳು ತಿಳಿಸಿವೆ.

ಕೆ.ಎಚ್.ಮುನಿಯಪ್ಪ, ರಾಮಲಿಂಗಾರೆಡ್ಡಿಯವರು ನೀಡಿದ ಬಹಿರಂಗ ಹೇಳಿಕೆಗಳಿಂದ, ಈಗಾಗಲೇ ಪಕ್ಷ ಸಾಕಷ್ಟು ಮುಜುಗರ ಅನುಭವಿಸಿದೆ. ಸತೀಶ್ ಜಾರಕಿಹೊಳಿ ಕೂಡ ತಮ ಅಸಮಾಧಾನ ಹೊರ ಹಾಕಿದರೆ, ಈ ಎಲ್ಲಾ ಬೆಳವಣಿಗೆಗಳ ಹಿಂದೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಸ್ತಕ್ಷೇಪವಿದೆ ಎಂಬ ಅನುಮಾನಗಳು ದಟ್ಟವಾಗಲಾರಂಭಿಸುತ್ತವೆ. ಸತೀಶ್ ಜಾರಕಿಹೊಳಿ ಆರಂಭದಿಂದಲೂ ಸಿದ್ದರಾಮಯ್ಯ ಅವರ ಪರಮಾಪ್ತರಾಗಿದ್ದಾರೆ. ಹೈಕಮಾಂಡ್ ರಾಜ್ಯ ನಾಯಕತ್ವದ ಗೊಂದಲ ಬಗೆ ಹರಿಸಬೇಕು ಎಂದು ಪದೇಪದೇ ಹೇಳಿಕೆ ನೀಡುತ್ತಿದ್ದರು. ಉಪ ಮುಖ್ಯಮಂತ್ರಿ ಹುದ್ದೆ ಹಾಗೂ ಕೆಪಿಸಿಸಿ ಅಧ್ಯಕ್ಷ ಹುದ್ದೆ ಮೇಲೆ ಕಣ್ಣಿಟ್ಟಿದ್ದರು. ಮುಂದೆ 2028ರ ವೇಳೆಗೆ ಮುಖ್ಯಮಂತ್ರಿಯಾಗುವ ಉಮೇದಿನಲ್ಲಿದ್ದಾರೆ. ಹೀಗಾಗಿ ಪ್ರಭಾವಿ ಖಾತೆಯ ಮೇಲೆ ಕಣ್ಣಿಟ್ಟಿದ್ದಾರೆ.

## ಜನರ ಒಳಿತಿಗಾಗಿ ಒಟ್ಟಾಗಿ ಕೆಲಸ ಮಾಡೋಣ, ರಾಜಕಾರಣ ಮಾಡುವುದು ಬೇಡ : ಸಿಎಂ ಡಿಕೆಶಿ




ಬೆಂಗಳೂರು: ರಾಜ್ಯದ ಜನರ ಒಳಿತಿಗಾಗಿ ಎಲ್ಲರೂ ಸೇರಿ ಒಟ್ಟಾಗಿ ಕೆಲಸ ಮಾಡೋಣ. ರಾಜಕಾರಣ ಮಾಡುವುದು ಬೇಡ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲಹೆ ನೀಡಿದ್ದಾರೆ.

ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ 44ನೇ ಪುಣ್ಯಸರಣೆ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಡಿ.ಕೆ.ಶಿವಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದಿಂದ ಜನ ಸಂಕಷ್ಟಕ್ಕೊಳಗಾಗಿದ್ದಾರೆ ಎಂದು ಪ್ರಧಾನಿ ನಿನ್ನೆ ಟೀಕಿಸಿದ್ದರು. ಇದಕ್ಕೆ ಇಂದು ತಾಳೆಯಿಂದಲೇ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಅವರು, ಪ್ರಧಾನಿಯವರು ತಾವು ಮುಖ್ಯಮಂತ್ರಿಯಾದಾಗ ಅಭಿನಂದಿಸಿದ್ದಾರೆ, ನಾನು ಅದಕ್ಕೆ ಧನ್ಯವಾದ ಹೇಳಿದ್ದೇನೆ. ಮುಂದಿನ ದಿನಗಳಲ್ಲಿ ಅವರನ್ನು ಗೌರವಯುತವಾಗಿ ಭೇಟಿ ಮಾಡುತ್ತೇನೆ. ಅವರೂ ರಾಜಕಾರಣ ಮಾಡುವುದು ಬೇಡ, ನಾವೂ ರಾಜಕಾರಣ ಮಾಡುವುದಿಲ್ಲ. ರಾಜ್ಯದ ಜನರ ಒಳಿತಿಗಾಗಿ ಒಟ್ಟಾಗಿ ಕೆಲಸ ಮಾಡೋಣ ಎಂದು ಹೇಳಿದರು.

ಸಚಿವ ರಾಮಲಿಂಗಾರೆಡ್ಡಿ ನನ್ನ ಸ್ನೇಹಿತರು, ಅವರ ಜೊತೆ ಚರ್ಚೆ ಮಾಡಿದ್ದೇನೆ. ವಾಟ್ಸಾಪ್‌ನಲ್ಲಿ ರಾಜೀನಾಮೆ ಕಳುಹಿಸಿದ್ದರು. ಈಗ ಅದು ಇತ್ಯರ್ಥ-ವಾಗಿದೆ ಎಂದಿದ್ದಾರೆ. ದೇವರಾಜ ಅರಸು ಅವರು, ಅರಸು ಮನೆತನಕ್ಕೆ ಸೇರಿದ್ದರೂ ಕೂಡ ವಿವಿಧ ಜಾತಿಗಳಲ್ಲಿನ ನಾಯಕರನ್ನು ಬೆಳೆಸಿದ್ದಾರೆ. ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ ಸಿಟಿ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದು, ದೇವರಾಜ ಅರಸು ಅವರು. ವೀರಪ್ಪಮೊಯ್ಲಿ, ಎಸ್.ಎಂ.ಕೃಷ್ಣ ಆಗ ಸಚಿವರಾಗಿದ್ದರು ಎಂದು ಹೇಳಿದರು. ಅರಸು ಅವರ ಕೆಲಸಗಳು 100 ವರ್ಷಗಳಾದರೂ ನಮ ನಡುವೆ ಚಿರಸ್ಥಾಯಿಯಾಗಿರುತ್ತವೆ. ಅವರ ಸೇವೆ ಮತ್ತು ಸಾಕ್ಷಿಗುಡ್ಡೆ ನಮ ಮುಂದಿದೆ. ಇಂದಿರಾಗಾಂಧಿ ಅವರ ಮಾರ್ಗದರ್ಶನದಲ್ಲಿ ಅರಸು ಅವರ ನಾಯಕತ್ವದಲ್ಲಿ ಉಳುವವನೇ ಭೂಮಿ ಒಡೆಯ ಕಾಯ್ದೆ ದೇಶಕ್ಕೆ ಮಾದ-ರಿಯೆಂಬಂತೆ ಕರ್ನಾಟಕದಲ್ಲಿ ಅನುಷ್ಠಾನಕ್ಕೆ ಬಂದಿದೆ ಎಂದು ಹೇಳಿದರು. ಅರಸು ಅವರ ಮಾರ್ಗದರ್ಶನದಲ್ಲಿ ಅವರ ಆಶಯಗಳಂತೆ ನಮ ಸರ್ಕಾರ ಕೆಲಸ ಮುಂದುವರೆಸಲಿದೆ ಎಂದು ಸ್ಪಷ್ಟಪಡಿಸಿದರು.

## ಉಪಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ಕೊಪ್ಪಳರವರ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆ




ಯಲಬುರ್ಗಾ : ಇಂದು ಯಲಬುರ್ಗಾ ತಾಲೂಕು ಪಂಚಾಯತಿ ಆವರಣದಲ್ಲಿ ಯಲಬುರ್ಗಾ/ ಕುಕನೂರ ತಾಲೂಕು ಪಂಚಾಯತಿ ಸಾಮಾನ್ಯ ಸಭೆಯು ಕೊಪ್ಪಳ ಜಿಲ್ಲಾ ಪಂಚಾಯತ್ ಮಾನ್ಯ ಉಪಕಾರ್ಯದರ್ಶಿಗಳಾದ ಟಿ ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ ಜರುಗಿರು.

ಈ ಸಭೆಯಲ್ಲಿ ಯಲಬುರ್ಗಾ/ ಕುಕನೂರ ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ತಮಗೆ ಸಂಬಂಧಪಟ್ಟ ಇಲಾಖೆಯ ಮಾಹಿತಿಯನ್ನು ಸಭೆಗೆ ತಿಳಿಸಿದರು. ಈ ವೇಳೆ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೀಲಗಂಗಾ ಬಬಲಾದ, ಸಂತೋಷ ಪಾಟೀಲ್ ಬಿರಾದಾರ್, ಸಹಾಯಕ ನಿರ್ದೇಶಕರು, ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

# ಅಂಡಮಾನ್‌ನಲ್ಲಿ ಎರಡನೇ ನೈಸರ್ಗಿಕ ಅನಿಲ ಆವಿಷ್ಕಾರ



ಶ್ರೀ ವಿಜಯ ಪುರಂ: ಸರ್ಕಾರಿ ಸ್ವಾಮ್ಯದ ಆಯಿಲ್ ಇಂಡಿಯಾ ಲಿಮಿಟೆಡ್ ಅಂಡಮಾನ್ ಕಡಲಾಚೆಯ ಪ್ರದೇಶದಲ್ಲಿ ತನ್ನ ಎರಡನೇ ನೈಸರ್ಗಿಕ ಅನಿಲ ಆವಿಷ್ಕಾರವನ್ನು ಮಾಡಿದೆ, ಇದು ಮುಂಬರುವ ವರ್ಷಗಳಲ್ಲಿ ಗಡಿನಾಡಿನ ಜಲಾನಯನ ಪ್ರದೇಶವು ಗಮನಾರ್ಹ ಹೈಡ್ರೋಕಾರ್ಬನ್ ಉತ್ಪಾದಿಸುವ ಪ್ರದೇಶವಾಗಿ ಹೊರಹೊಮ್ಮಬಹುದೆಂಬ ಭರವಸೆಯನ್ನು ಬಲಪಡಿಸುತ್ತದೆ.

ಅಂಡಮಾನ್ ದ್ವೀಪಗಳ ಪೂರ್ವ ಕರಾವಳಿಯಿಂದ ಸುಮಾರು 15 ಕಿಲೋಮೀಟರ್ ದೂರದಲ್ಲಿರುವ 355 ಮೀಟರ್ ಆಳದಲ್ಲಿರುವ ವಿಜಯಪುರಂ -3 ಪರಿಶೋಧನಾ ಬಾವಿಯಲ್ಲಿ ಇತ್ತೀಚಿನ ಆವಿಷ್ಕಾರವನ್ನು ಮಾಡಲಾಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಸೆಪ್ಟೆಂಬರ್ 2025 ರಲ್ಲಿ ವಿಜಯಪುರಂ -2 ನಲ್ಲಿ ನೈಸರ್ಗಿಕ ಅನಿಲ ಆವಿಷ್ಕಾರದ ನಂತರ, ಈ ಬ್ಲಾಕ್‌ನಲ್ಲಿ ಒಐಎಲ್ ಕೊರೆಯುವ ಎರಡನೇ ಯಶಸ್ವಿ ಅನಿಲ-ಬೇರಿಂಗ್ ಬಾವಿ ಇದಾಗಿದೆ.ಕಂಪನಿಯ ನಡೆಯುತ್ತಿರುವ ಅಂಡಮಾನ್ ಪರಿಶೋಧನಾ ಅಭಿಯಾನದ ಅಡಿಯಲ್ಲಿ ಇಲ್ಲಿಯವರೆಗೆ ಕೊರೆಯಲಾದ ಮೂರು ಪರಿಶೋಧನಾ ಬಾವಿಗಳಲ್ಲಿ, ಎರಡು ಈಗ ಹೈಡ್ರೋಕಾರ್ಬನ್‌ಗಳ ಉಪಸ್ಥಿತಿಯನ್ನು ದೃಢಪಡಿಸಿವೆ, ಇದು ಜಲಾನಯನ ಪ್ರದೇಶದ ಪರಿಶೋಧನಾ ದೃಷ್ಟಿಕೋನವನ್ನು ಗಣನೀಯವಾಗಿ ಸುಧಾರಿಸಿದೆ ಎಂದು ಕಂಪನಿ ಹೇಳಿದೆ.

ಕಡಲಾಚೆಯ ಜಲಾನಯನ ಪ್ರದೇಶಗಳಲ್ಲಿ ಹೆಚ್ಚಿದ ಪರಿಶೋಧನೆಯ ಮೂಲಕ ದೇಶೀಯ ಇಂಧನ ಭದ್ರತೆಯನ್ನು ಬಲಪಡಿಸುವ ಭಾರತದ ಪ್ರಯತ್ನಗಳಲ್ಲಿ ಪುರಿ ಈ ಅಭಿವೃದ್ಧಿಯನ್ನು ಮತ್ತೊಂದು ಸಕಾರಾತ್ಮಕ ಬೆಳವಣಿಗೆ ಎಂದು ಬಣ್ಣಿಸಿದ್ದಾರೆ. ಈಯೋಸೀನ್ ರಚನೆಯಲ್ಲಿ 1900 ಮೀಟರ್‌ಗಿಂತಲೂ ಹೆಚ್ಚು ಆಳದಲ್ಲಿ ಬಾವಿಯ ಆರಂಭಿಕ ಉತ್ಪಾದನಾ ಪರೀಕ್ಷೆಯು ನಿರಂತರ ಜ್ವಾಲೆಯ ಮೂಲಕ ನೈಸರ್ಗಿಕ ಅನಿಲದ ಉಪಸ್ಥಿತಿಯನ್ನು ಸ್ಥಾಪಿಸಿದೆ ಎಂದು ಅವರು ಎಕ್?ಸ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.ಮಾನ್ಯ ಪ್ರಧಾನ ಮಂತ್ರಿ ಜಿ ಅವರು 2025 ರ ಸ್ವಾತಂತ್ರ್ಯ ದಿನದಂದು ಘೋಷಿಸಿದ ಸಮುದ್ರ ಮಂಥನ ಮಿಷನ್ (ರಾಷ್ಟ್ರೀಯ ಆಳವಾದ ನೀರಿನ ಪರಿಶೋಧನಾ ಮಿಷನ್) ಅಡಿಯಲ್ಲಿ, ನಮ್ಮ ಹೈಡ್ರೋಕಾರ್ಬನ್ ನಿಕ್ಷೇಪಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ನಮ್ಮ ಕಡಲಾಚೆಯ ಜಲಾನಯನ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ಆಳವಾದ ನೀರಿನ ಮತ್ತು ಅಲ್ಟ್ರಾ ಆಳವಾದ ನೀರಿನ ಪರಿಶೋಧನಾ ಬಾವಿಗಳನ್ನು ಯೋಜಿಸಲಾಗಿದೆ ಎಂದು ಸಚಿವರು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ನೈಸರ್ಗಿಕ ಅನಿಲದ ಈ ಉಪಸ್ಥಿತಿಯು ಜಾಗತಿಕ ಆಳವಾದ ನೀರಿನ ಪರಿಶೋಧನಾ ತಜ್ಞರೊಂದಿಗೆ ಸಮನ್ವಯದೊಂದಿಗೆ ದೇಶವು ಪರಿಶೋಧನಾ ಮಹತ್ವಾಕಾಂಕ್ಷೆಗಳನ್ನು ಮುಂದುವರಿಸಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು.ಕಂಪನಿಯ ಪ್ರಕಾರ, ಈಯೋಸೀನ್ ರಚನೆಯಲ್ಲಿ 1,900 ಮೀಟರ್‌ಗಿಂತಲೂ ಹೆಚ್ಚು ಆಳದಲ್ಲಿ ನಡೆಸಲಾದ ಆರಂಭಿಕ ಉತ್ಪಾದನಾ ಪರೀಕ್ಷೆಯು ನಿರಂತರವಾದ ಭುಗಿಲೆದ್ದುವಿಕೆಯ ಮೂಲಕ ನೈಸರ್ಗಿಕ ಅನಿಲದ ಉಪಸ್ಥಿತಿಯನ್ನು ಸ್ಥಾಪಿಸಿತು.ರಂಧ್ರದ ನಂತರ, ಬಾವಿ ತ್ವ-ರಿತ ಒತ್ತಡದ ನಿರ್ಮಾಣವನ್ನು ದಾಖಲಿಸಿತು ಮತ್ತು ಉತ್ಪಾದನೆಯನ್ನು ಪ್ರಾರಂಭಿಸಿತು, ಇದು ಜಲಾಶಯದ ಗುಣಲಕ್ಷಣಗಳನ್ನು ಪ್ರೋತ್ಸಾಹಿಸುತ್ತದೆ.

ಭಾರತದ ಕಡಲಾಚೆಯ ಪರಿಶೋಧನಾ ಪ್ರಯತ್ನಗಳಿಗೆ, ವಿಶೇಷವಾಗಿ ತುಲನಾತ್ಮಕವಾಗಿ ಕಡಿಮೆ ಅನ್ವೇಷಿಸಲ್ಪಟ್ಟ ಅಂಡಮಾನ್ ಜಲಾನಯನ ಪ್ರದೇಶದಲ್ಲಿ, ಸತತವಾಗಿ ನಡೆಯುತ್ತಿರುವ ಅನಿಲ ಆವಿಷ್ಕಾರಗಳನ್ನು ಒಂದು ಪ್ರಮುಖ ಮೈಲಿಗಲ್ಲು ಎಂದು ಪರಿಗಣಿಸಲಾಗುತ್ತಿದೆ.ಈ ಸಂಶೋಧನೆಗಳು ಪ್ರದೇಶದ ಹೈಡ್ರೋಕಾರ್ಬನ್ ಸಾಮರ್ಥ್ಯವನ್ನು ಅನ್ಲಾಕ್ ಮಾಡುವ ಗು-ರಿಯನ್ನು ಹೊಂದಿರುವ ತೀವ್ರ ಪರಿಶೋಧನೆ ಮತ್ತು ಮೌಲ್ಯಮಾಪನ ಚಟುವಟಿಕೆಗಳಿಗೆ ದಾರಿ ಮಾಡಿಕೊಡಬಹುದು ಎಂದು ಕೈಗಾರಿಕಾ ವೀಕ್ಷಕರು ನಂಬುತ್ತಾರೆ.ಇತ್ತೀಚಿನ ಆವಿಷ್ಕಾರವು ಕಾರ್ಯನಿರ್ವಹಿಸುತ್ತಿರುವ ಪೆಟ್ರೋಲಿಯಂ ವ್ಯವಸ್ಥೆಯ ಪ್ರಮುಖ ಸೂಚಕವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಸೇರ್ಪಡೆಯ ಉಪಸ್ಥಿತಿಯನ್ನು ಸೂಚಿಸುತ್ತದೆ ಎಂದು ಹೇಳಿದೆ.

# ತವರು ಕ್ಷೇತ್ರ ಕನಕಪುರಕ್ಕೆ ನಾಳೆ ಸಿಎಂ ಡಿಕೆಶಿ ಭೇಟಿ : ಕಾರ್ಯಕರ್ತರಲ್ಲಿ ಸಂಭ್ರಮ

ಬೆಂಗಳೂರು: ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ತಮ ತವರು ಕ್ಷೇತವಾದ ಕನಕಪುರಕ್ಕೆ ನಾಳೆ ಡಿ.ಕೆ.ಶಿವಕುಮಾರ್ ಅವರು ಭೇಟಿ ನೀಡಲಿದ್ದು, ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಡಗರ, ಸಂಭ್ರಮ ಮನೆ ಮಾಡಿದೆ.

ಮನೆ ಬಾಗಿಲಿಗೆ ಮುಖ್ಯಮಂತ್ರಿ ಎಂಬ ಶೀರ್ಷಿಕೆಯಡಿ ಅದ್ದೂರಿ ಸ್ವಾಗತ ಕೋರಲು ಸಕಲ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಬೆಂಗಳೂ-ರಿನಿಂದ ಕನಕಪುರಕ್ಕೆ ರಸ್ತೆ ಮಾರ್ಗವಾಗಿ ಮುಖ್ಯಮಂತ್ರಿಗಳು ಆಗಮಿಸುವುದರಿಂದ ರಸ್ತೆ ಇಕ್ಕೆಲಗಳಲ್ಲಿ ಸ್ವಾಗತ, ಶುಭಾಶಯ ಕೋರುವ ಫ್ಲೆಕ್?ಸ, ಬ್ಯಾನರ್‌ಗಳು ರಾರಾಜಿಸುತ್ತಿವೆ.

ಕನಕಪುರದಲ್ಲಿ ಹಬ್ಬದ ರೀತಿಯ ವಾತಾವರಣ ಉಂಟಾಗಿದ್ದು, ಸಂಭ್ರಮ ಮನೆ ಮಾಡಿದೆ. ಪಟ್ಟಣವನ್ನು ತಳಿರು, ತೋರಣಗಳಿಂದ ವಿಶೇಷವಾಗಿ ಅಲಂಕ-ರಿಸಲಾಗಿದೆ. ಹಾರೋಹಳ್ಳಿ ವೃತ್ತ, ತುಂಗಣಿ, ಟಿ.ಬೇಕುಪ್ಪೆ ವೃತ್ತ, ನಾರಾಯಣಪುರ, ಕೋಡಿಹಳ್ಳಿ, ಹುಣಸನಹಳ್ಳಿ, ಹೊಸದುರ್ಗ, ಹುಟ್ಟೂರು ದೊಡ್ಡಾಲಹಳ್ಳಿ, ಸಾತನೂರು, ಕಬ್ಬಾಳು ಮೊದಲಾದ ಗ್ರಾಮಗಳಿಗೆ ಮುಖ್ಯಮಂತ್ರಿ ಭೇಟಿ ನೀಡಲಿದ್ದಾರೆ.

ಮುಖ್ಯಮಂತ್ರಿಯನ್ನು ಅಭಿನಂದಿಸಲು ಗ್ರಾಮಗಳಲ್ಲಿ ಸಕಲ ರೀತಿಯಲ್ಲೂ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜೊತೆಗೆ ಹಾರೋಹಳ್ಳಿ, ಕನಕಪುರ ತಾಲ್ಲೂಕಿನ ಕೃತಜ್ಞತಾ ಸಮರ್ಪಣಾ ಕಾರ್ಯಕ್ರಮವನ್ನು ಹಮಿಕೊಳ್ಳಲಾಗಿದೆ. ಕಾರ್ಯಕ್ರಮ ಮುಗಿದ ಬಳಿಕ ರಾತ್ರಿ ಬೆಂಗಳೂರಿಗೆ ಮುಖ್ಯಮಂತ್ರಿ ಮರಳುವ ಕಾರ್ಯಕ್ರಮವಿದೆ.




ಕ್ಷೇತ್ರದ ಮತದಾರರು ಬೆಂಗಳೂ-ರಿನ ವಿಧಾನಸೌಧಕ್ಕೆ ಬಂದು ನನ್ನನ್ನು ನೋಡಿ ಸಮಸ್ಯೆಗಳನ್ನು ಹೇಳಿಕೊಳ್ಳುವುದು ಕಷ್ಟವಾಗಿರುವ ಹಿನ್ನೆಲೆಯಲ್ಲಿ ನಾನೇ ಕ್ಷೇತ್ರದ ಮತದಾರರ ಬಳಿಗೆ ತೆರಳಿ ಅವರ ಅಹವಾಲುಗಳನ್ನು ಆಲಿಸುತ್ತೇನೆ ಎಂದು ಶಿವಕುಮಾರ್ ಹೇಳಿದ್ದಾರೆ.

# ಯುಧಿಷ್ಠಿರನು ದುಃಖಿತನಾದ ಪ್ರಸಂಗ

ಜಯದ್ರಥನನ್ನು ಸೋಲಿಸಿ, ದ್ರೌಪದಿಯನ್ನು ಹಿಂದೆ ಪಡೆದ ಯುಧಿಷ್ಠಿರನು ದ್ರೌಪದೀಹರಣದ ಪ್ರಕರಣದಿಂದ ಅತ್ಯಂತ ದುಃಖಿತನಾಗಿ ಮಾರ್ಕಂಡೇಯನನ್ನು ಪ್ರಶ್ನಿಸಿದನು: "ಮಹಾಮುನೇ! ದ್ರುಪದಾತ್ಮಜೆಯ ಕುರಿತು ನಾನು ಎಷ್ಟು ಶೋಕಿಸುತ್ತಿದ್ದೇನೋ ಅಷ್ಟು ನನ್ನ ಕುರಿತಾಗಲೀ, ನನ್ನ ಈ ಭ್ರಾತೃಗಳ ಕುರಿತಾಗಲೀ ಅಥವಾ ಕಳೆದು ಹೋದ ರಾಜ್ಯದ ಕುರಿತಾಗಲೀ ಶೋಕಿಸುತ್ತಿಲ್ಲ. ದ್ಯೂತದಲ್ಲಿ ದುರಾತ್ಮರಿಂದ ಕಷ್ಟಕ್ಕೊಳಗಾಗಿದ್ದ ನಮ್ಮನ್ನು ಪಾರುಮಾಡಿದ ಕೃಷ್ಣೆಯನ್ನು ಪುನಃ ಜಯದ್ರಥನು ಬಲಾತ್ಕಾರವಾಗಿ ಅಪಹರಿಸಿದನು. ಪತಿವ್ರತೆ ದ್ರುಪದಾತ್ಮಜೆಯ ಹಾಗಿದ್ದ ಇದಕ್ಕೂ ಮೊದಲು ನೀನು ನೋಡಿದ ಅಥವಾ ಕೇಳಿದ ಸೀಮಂತಿನಿ ಯಾರಾದರೂ ಇದ್ದಾರೆಯೇ?" ಈ ಪ್ರಶ್ನೆಗೆ ಉತ್ತರವಾಗಿ ಮಾರ್ಕಂಡೇಯನು ಯುಧಿಷ್ಠಿರನಿಗೆ ಕುಲಸ್ತ್ರೀಯರ ಮಹಾಭಾಗ್ಯವೆಲ್ಲವನ್ನೂ ಹೊಂದಿದ್ದ ರಾಜಕನ್ಯೆ ಸಾವಿತ್ರಿಯ ಕುರಿತು ಹೇಳಿದನು.

ರಾಜಾ ಅಶ್ವಪತಿಯು ಸಾವಿತ್ರಿಯ ವರದಿಂದ ಮಗಳನ್ನು ಪಡೆದುದು, ಮಗಳು ಸಾವಿತ್ರಿಯು ವರಾನ್ವೇಷಣೆಗೆ ಹೋದುದು ಮದ್ರದಲ್ಲಿ ಬ್ರಾಹ್ಮಣರ ಮತ್ತು ಶರಣರ ಸಾನ್ನಿಧ್ಯದಲ್ಲಿ ಧರ್ಮಾತ್ಮ ಸತ್ಯಸಂಧ ಜಿತೇಂದ್ರಿಯ ಅಶ್ವಪತಿ ಎನ್ನುವ ರಾಜನೋರ್ವನಿದ್ದನು. ಅವನು ಯಜ್ಞಗಳನ್ನು ಮಾಡುತ್ತಿದ್ದನು; ಮುಂದೆನಿಂತು ದಾನಗಳನ್ನು ನೀಡುತ್ತಿದ್ದನು; ಪೌರ-ಜಾನಪದರ ಪ್ರಿಯನಾಗಿದ್ದನು; ಮತ್ತು ಸರ್ವಭೂತಗಳ ಹಿತದಲ್ಲಿ ನಿರತನಾಗಿದ್ದನು. ಕ್ಷಮಾವಂತನೂ, ಸತ್ಯವನ್ನೇ ಮಾತನಾಡುವವನೂ, ಇಂದ್ರಿಯಗಳನ್ನು ಗೆದ್ದವನೂ ಆದ ಅವನಿಗೆ ಮಕ್ಕಳಿರಲಿಲ್ಲ. ವಯಸ್ಸನ್ನು ದಾಟಿದ್ದ ಅವನಿಗೆ ಇದೊಂದು ಸಂತಾಪದ ವಿಷಯವೇ ಆಗಿತ್ತು. ತನಗೆ ಮಕ್ಕಳಾಗಬೇಕೆಂದು ಅವನು ನಿರ್ಧಿಷ್ಟ ವೇಳೆಗಳಲ್ಲಿ ಅಲ್ಪವೇ ಆಹಾರವನ್ನು ಸೇವಿಸುತ್ತಾ ಬ್ರಹ್ಮಚರ್ಯದಲ್ಲಿ ಜಿತೇಂದ್ರಿಯನಾಗಿದ್ದು ತೀವ್ರ ನಿಯಮಗಳಲ್ಲಿ ತೊಡಗಿದನು. ಅವನು ಪ್ರತಿದಿನವೂ ಸಾವಿತ್ರಿಗೆ ನೂರುಸಾವಿರ ಆಹುತಿಗಳನ್ನು ನೀಡುತ್ತಿದ್ದನು ಮತ್ತು ದಿನದ ಆರನೆಯ ಒಂದು ಭಾಗದಲ್ಲಿ ಮಾತ್ರ ಅಲ್ಪ ಆಹಾರವನ್ನು ತೆಗೆದುಕೊಳ್ಳುತ್ತಿದ್ದನು. ಈ ರೀತಿ ನಿಯಮದಲ್ಲಿದ್ದುಕೊಂಡು ಹದಿನೆಂಟು ವರ್ಷಗಳು ಕಳೆದ ನಂತರ ಸಾವಿತ್ರಿಯು ಅವನ ಮೇಲೆ ಸಂತುಷ್ಟಳಾಗಿ ಕಾಣಿಸಿಕೊಂಡಳು. ಅಗ್ನಿಹೋತ್ರದಿಂದ ಎದ್ದುಬಂದ ಆ ಮಹತಾನ್ವಿತೆ ವರದೆಯು ಹರ್ಷದಿಂದ ರಾಜನಿಗೆ ಹೇಳಿದಳು: "ರಾಜನ್! ನಿನ್ನ ಬ್ರಹ್ಮಚರ್ಯ, ಪರಿಶುದ್ಧತೆ, ದಮ, ನಿಯಮ, ಮತ್ತು ನನ್ನ ಮೇಲಿರಿಸಿರುವ ಸರ್ವಾತ್ಮ ಭಕ್ತಿಗೆ ಸಂತುಷ್ಟಳಾಗಿದ್ದೇನೆ. ವರವನ್ನು ಕೇಳು!" ಅಶ್ವಪತಿಯು ಹೇಳಿದನು: "ದೇವೀ! ಮಕ್ಕಳು ಬೇಕೆಂಬ ಆಸೆಯಿಂದ ನಾನು ಈ ಧರ್ಮಸಮಾರಂಭದಲ್ಲಿ ತೊಡಗಿದ್ದೇನೆ. ನನ್ನಿಂದ ಸಂತೃಪ್ತಳಾಗಿದ್ದರೆ ನನ್ನ ಕುಲವನ್ನು ವೃದ್ಧಿಸುವ ಹಲವು ಪುತ್ರರನ್ನು ನನಗೆ ನೀಡು! ದ್ವಿಜರಿಗೆ ಸಂತಾನವೇ ಪರಮ ಧರ್ಮವೆಂದು ಹೇಳುತ್ತಾರೆ." ಸಾವಿತ್ರಿಯು ಹೇಳಿದಳು: "ರಾಜನ್! ನಿನ್ನ ಈ



ಅಭಿಪ್ರಾಯವನ್ನು ತಿಳಿದು ಹಿಂದೆಯೇ ನಿನಗೆ ಪುತ್ರರನ್ನು ನೀಡುವುದರ ಕುರಿತು ಪಿತಾಮಹನಲ್ಲಿ ಕೇಳಿಕೊಂಡಿದ್ದೆ. ಸ್ವಯಂಭುವು ವಿಹಿಸಿದಂತೆ ಅವನ ಪ್ರಸಾದದಿಂದ ನಿನಗೆ ಶೀಘ್ರದಲ್ಲಿಯೇ ಸೌಮ್ಯ ತೇಜಸ್ವಿನೀ ಕನ್ಯೆಯು ಜನಿಸುವಳು. ಇದರ ಕುರಿತು ಮರುಪ್ರಶ್ನೆಯನ್ನು ಕೇಳಬೇಡ ಅಥವಾ ವಾದಿಸಬೇಡ. ನಿನ್ನ ಮೇಲೆ ಸಂತುಷ್ಟಳಾಗಿ ಪಿತಾಮಹನು ವಿಧಿಸಿದುದನ್ನು ನಿನಗೆ ಹೇಳುತ್ತಿದ್ದೇನೆ." ಮಸಾವಿತ್ರಿಯ ವಚನಕ್ಕೆ ಹಾಗೆಯೇ ಆಗಲೆಂದು ಅವನು ಒಪ್ಪಿಕೊಳ್ಳಲು "ಇದು ಶ್ರೀಘ್ರದಲ್ಲಿಯೇ ಆಗುತ್ತದೆ" ಎಂದು ಅನುಗ್ರಹಿಸಿ ಸಾವಿತ್ರಿಯು ಅಂತರ್ಧಾನಳಾದಳು. ರಾಜನು ತನ್ನ ಅರಮನೆಗೆ ಹಿಂದಿರುಗಿ, ಸ್ವರಾಜ್ಯದಲ್ಲಿ ಪ್ರಜೆಗಳನ್ನು ಪ್ರೀತಿ-ಧರ್ಮಗಳಿಂದ ಪಾಲಿಸಿದನು.

ಕೆಲವು ಸಮಯ ಕಳೆಯಲು, ನಿಯತವ್ರತ ರಾಜನು ಧರ್ಮಚಾರಿಣಿ ಹಿರಿಯ ರಾಣಿಗೆ ಗರ್ಭವನ್ನಿತ್ತನು. ರಾಜಪುತ್ರಿ ಮಾಲವಿಯಲ್ಲಿ ಗರ್ಭವು ಅಂಬರದಲ್ಲಿ ಶುಕ್ಲಪಕ್ಷದ ತಾರಾಪತಿ ಚಂದ್ರನಂತೆ ವರ್ಧಿಸಿತು. ಕಾಲ ಪ್ರಾಪ್ತವಾಗಲು ಅವಳು ರಾಜೀವಲೋಚನೆ ಕನ್ಯೆಗೆ ಜನ್ಮವಿತ್ತಳು. ನೃಪತಿಯು ಸಂತೋಷದಿಂದ ಅವಳ ಎಲ್ಲ ಕ್ರಿಯೆಗಳನ್ನೂ ನೆರವೇರಿಸಿದನು. ಆಹುತಿಗಳಿಂದ ತೃಪ್ತಳಾದ ಸಾವಿತ್ರಿಯಿಂದ ಪಡೆದ ಅವಳಿಗೆ ತಂದೆ ಮತ್ತು ವಿಪ್ರರು "ಸಾವಿತ್ರಿ" ಎಂದೇ ನಾಮಕರಣ ಮಾಡಿದರು. ಆ ನೃಪತಾತ್ಮಜೆಯು ಸಾಕ್ಷಾತ್ ಶ್ರೀಯೇ ಅವತರಿಸಿರುವಳೋ ಎನ್ನುವಂತೆ ಅತೀವ ಸುಂದರಿಯಾಗಿ ಬೆಳೆದಳು. ಸಮಯವು ಕಳೆದಂತೆ ಆ ಕನ್ಯೆಯು ಯೌವನಾವಸ್ಥೆಗೆ ಬಂದಳು. ಆ ಸುಮಧ್ಯಮೆ, ಪೃಥುಶ್ರೋಣೀ, ಚಿನ್ನದ ಪುತ್ಥಳಿಯಂತಿದ್ದ ಅವಳನ್ನು ನೋಡಿ ಜನರು ದೇವಕನ್ಯೆಯೇ ತಮ್ಮ ನಡುವೆ ಬಂದಿದ್ದಾಳೋ ಎಂದು ಅಚ್ಚರಿ ಪಡುತ್ತಿದ್ದರು. ಆ ಪದ್ಮಪಲಾಶಾಕ್ಷಿಯಾದರೋ ತೇಜಸ್ಸಿನಿಂದ ಪ್ರಜ್ವಲಿಸುತ್ತಿರಲು ಅವಳ ತೇಜಸ್ಸಿನಿಂದ ಹಿಂಜರಿದ ಯಾವ ಪುರುಷನೂ ಅವಳನ್ನು ವರಿಸಲಿಲ್ಲ.

ಒಮ್ಮೆ ಉತ್ತಮ ದಿನದಂದು ಉಪವಾಸದಿಂದಿದ್ದು, ತಲೆಗೆ ಸ್ನಾನಮಾಡಿ ದೇವತೆಗಳನ್ನು ಪೂಜಿಸಿ ಸಾವಿತ್ರಿಯು ವಿಧಿವತ್ತಾಗಿ ಬ್ರಾಹ್ಮಣರು ವಾಚಿಸುತ್ತಿರಲು ಅಗ್ನಿಯಲ್ಲಿ ಆಹುತಿಗಳನ್ನಿತ್ತಳು. ಅನಂತರ ಸುಮನಸ್ಕಳಾಗಿ ಉಳಿದ ಪ್ರಸಾದವನ್ನು ಹಿಡಿದು ಶ್ರೀಯಂತೆ ರೂಪವತಿಯಾಗಿದ್ದ ಆ ದೇವಿಯು ತಂದೆಯ ಬಳಿ ಹೋದಳು. ಮೊದಲು ಪ್ರಸಾದವನ್ನು ಅವನಿಗಿತ್ತು ತಂದೆಯ ಪಾದಗಳಿಗೆರಗಿ, ಅಂಜಲೀಬದ್ಧಳಾಗಿ ಆ ವರಾರೋಹೆಯು ರಾಜನ ಬಳಿಯಲ್ಲಿ ನಿಂತುಕೊಂಡಳು. ಯೌವನಾವಸ್ಥೆಯಲ್ಲಿರುವ ತನ್ನ ದೇವರೂಪಿಣೀ ಮಗಳನ್ನು ನೋಡಿ ನೃಪತಿಯು ಅವಳನ್ನು ಕೇಳಿಕೊಂಡು ಇದೂವರೆಗೆ ಯಾವ ವರರೂ ಬರಲಿಲ್ಲವಲ್ಲಾ ಎಂದು ದುಃಖಿಸಿ ಹೇಳಿದನು: "ಪುತ್ರಿ! ನಿನ್ನನ್ನು ಕೊಡುವ ಕಾಲವು ಬಂದಿದೆ. ಆದರೆ ಇದೂವರೆಗೆ ಯಾರೂ ನಿನ್ನನ್ನು ಕೇಳಿಕೊಂಡು ಬಂದಿಲ್ಲ. ಗುಣದಲ್ಲಿ ನಿನ್ನಂತೆಯೇ ಇರುವ ಪತಿಯನ್ನು ನೀನೇ ಇಷ್ಟಪಟ್ಟು ಆರಿಸಿಕೋ! ನೀನು ಬಯಸಿದ ಪುರುಷನ ಕುರಿತು ಹೇಳು. ವಿಮರ್ಶಿಸಿ ನಾನು ನಿನಗಿಷ್ಟನಾದ ವರನಿಗೇ ನಿನ್ನನ್ನು ಕೊಡುತ್ತೇನೆ. ಧರ್ಮಶಾಸ್ತ್ರಗಳನ್ನು ಓದಿ ತಿಳಿದ ದ್ವಿಜರಿಂದ ಕೇಳಿದುದನ್ನೇ ನಾನು ನಿನಗೆ ಹೇಳುತ್ತಿದ್ದೇನೆ. ನೀನೂ ಕೂಡ ನಾನು ಹೇಳುತ್ತಿರುವ ಈ ಮಾತನ್ನು ಕೇಳು. ವಯಸ್ಸಿಗೆ ಬಂದ ಮಗಳನ್ನು ಕೊಡದೇ ಇರುವ ತಂದೆಯನ್ನು ನಿಂದಿಸಬೇಕು, ಮಕ್ಕಳನ್ನು ಪಡೆಯದ ಪತಿಯನ್ನು ನಿಂದಿಸಬೇಕು, ವಿಧವೆ ತಾಯಿಯನ್ನು ನೋಡಿಕೊಳ್ಳದ ಪುತ್ರನನ್ನು ನಿಂದಿಸಬೇಕು. ನನ್ನ ಈ ಮಾತನ್ನು ಕೇಳಿ ಬೇಗನೇ ಪತಿಯನ್ನು ಹುಡುಕಿಕೋ. ನಾನು ದೇವತೆಗಳ ನಿಂದನೆಗೊಳಾಗಾಗದಂತೆ ಮಾಡು!"

ಮಗಳಿಗೆ ಈ ರೀತಿ ಹೇಳಿ ಅವನು ಪ್ರಯಾಣಕ್ಕೆ ಸಿದ್ಧತೆಯನ್ನು ಮಾಡಿಕೊಂಡು ಅವಳೊಂದಿಗೆ ಹೊರಡಲು ವೃದ್ಧಮಂತ್ರಿಗಳಿಗೆ ಆಜ್ಞಾಪಿಸಿದನು. ನಾಚಿಕೊಂಡ ಆ ಮನಸ್ವಿನಿಯು ತಂದೆಯ ಪಾದಗಳಿಗೆ ವಂದಿಸಿ ಪಿತೃವಚನವನ್ನು ಆಜ್ಞೆಯೆಂದು ಸ್ವೀಕರಿಸಿ ತಕ್ಷಣವೇ ಹೊರಟಳು. ಬಂಗಾರದ ರಥದಲ್ಲಿ ಕುಳಿತು ಸಚಿವರಿಂದ ಸುತ್ತುವರೆದು ರಮ್ಯ ವನಗಳಲ್ಲಿ ರಾಜರ್ಷಿ ತಪೋವನಗಳಲ್ಲಿ ಸುತ್ತಿದಳು. ಅಲ್ಲಿ ವೃದ್ಧರನ್ನು ಗೌರವಿಸಿ ಅವರ ಪಾದಗಳಿಗೆರಗಿ ಕ್ರಮವಾಗಿ ಎಲ್ಲ ವನಗಳಿಗೂ ಹೋದಳು. ಹೀಗೆ ಸರ್ವತೀರ್ಥಗಳಲ್ಲಿ ಧನವನ್ನು ದಾನಮಾಡುತ್ತಾ ಆ ನೃಪತಾತ್ಮಜೆಯು ದ್ವಿಜಮುಖ್ಯರಿರುವ ಬೇರೆ ಬೇರೆ ದೇಶಗಳಿಗೆ ಪ್ರಯಾಣಮಾಡಿದಳು.

ಸಾವಿತ್ರಿಯು ಸತ್ಯವಾನನನ್ನು ವಿವಾಹವಾಗಲು ನಿಶ್ಚಯಿಸಿದುದು ಆಗ ಒಮ್ಮೆ ಮದ್ರಾಧಿಪನು ನಾರದನೊಡನೆ ಸಭಾಮಧ್ಯದಲ್ಲಿ ಕುಳಿತು ಮಾತಿನಲ್ಲಿ ತೊಡಗಿರಲು ಮಂತ್ರಿಗಳ ಸಹಿತ ಸಾವಿತ್ರಿಯು ಸರ್ವ ತೀರ್ಥ-ಆಶ್ರಮಗಳಿಗೆ ತಿರುಗಾಡಿ ತಂದೆಯ ಮನೆಗೆ ಹಿಂದಿರುಗಿದಳು. ನಾರದನೊಂದಿಗೆ ಕುಳಿತಿದ್ದ ತಂದೆಯನ್ನು ನೋಡಿ ಆ ಶುಭೆಯು ಇಬ್ಬರ ಪಾದಗಳಿಗೂ ಶಿರಬಾಗಿ ನಮಸ್ಕರಿಸಿದಳು. ಆಗ ನಾರದನು ಕೇಳಿದನು: "ನೃಪ! ನಿನ್ನ ಮಗಳು ಎಲ್ಲಿಗೆ ಹೋಗಿದ್ದಳು ಮತ್ತು ಎಲ್ಲಿಂದ ಬರುತ್ತಿದ್ದಾಳೆ? ನೀನು ಏಕೆ ಈ ಯುವತಿಯನ್ನು ಇದೂವರೆಗೂ ಯೋಗ್ಯ ವರನಿಗೆ ಕೊಟ್ಟಿಲ್ಲ?" ಅಶ್ವಪತಿಯು ಹೇಳಿದನು: "ದೇವರ್ಷೇ! ಇದೇ ಕಾರ್ಯದ ಸಲುವಾಗಿ ನಾನು ಅವಳನ್ನು ಕಳುಹಿಸಿದ್ದೆ ಮತ್ತು ಅಲ್ಲಿಂದಲೇ ಅವಳು ಬರುತ್ತಿದ್ದಾಳೆ. ಅವಳು ಯಾರನ್ನು ಪತಿಯನ್ನಾಗಿ ವರಿಸಿದ್ದಾಳೆ ಎನ್ನುವುದನ್ನು ಅವಳಿಂದಲೇ ಕೇಳೋಣ." ವಿಸ್ತಾರವಾಗಿ ಹೇಳು ಎಂದು ತಂದೆಯು ಆಜ್ಞಾಪಿಸಲು ಸಾವಿತ್ರಿಯು ಅವನ ಮಾತನ್ನು ದೇವನದೆಂದೇ ಸ್ವೀಕರಿಸಿ ಹೇಳಿದಳು: "ಶಾಲ್ವದಲ್ಲಿ ಧರ್ಮಾತ್ಮ ದ್ಯುಮತ್ಸೇನ ಎಂಬ ರಾಜನಿದ್ದನು. ಆದರೆ ಅವನು ಅಂಧನಾದನು. ಕಣ್ಣುಗಳನ್ನು ಕಳೆದುಕೊಂಡ ಮತ್ತು ಮಗನು ಇನ್ನೂ ಬಾಲಕನಾಗಿದ್ದ ಆ ಧೀಮಂತನ ಮೇಲೆ ಹಿಂದಿನಿಂದ ವೈರತ್ವವನ್ನು ಹೊಂದಿದ್ದ ನೆರೆಯ ರಾಜನು ಆಕ್ರಮಣ ಮಾಡಿ ರಾಜ್ಯವನ್ನು ಅಪಹರಿಸಿದನು. ಅವನು ತನ್ನ ಬಾಲಕ ಮಗ ಮತ್ತು ಪತ್ನಿಯೊಡನೆ ವನವನ್ನು ಸೇರಿದನು. ಮಹಾರಣ್ಯಕ್ಕೆ ಹೋಗಿ ಆ ಮಹಾವ್ರತನು ತಪಸ್ಸನ್ನು ತಪಿಸಿದನು. ರಾಜಧಾನಿಯಲ್ಲಿ ಹುಟ್ಟಿದ್ದ ಅವನ ಮಗನು ತಪೋವನದಲ್ಲಿ ಬೆಳೆದನು. ಆ ಸತ್ಯವಾನನು ನನಗೆ ಅನುರೂಪ ಪತಿಯೆಂದು ಮನಸಾ ಆರಿಸಿಕೊಂಡಿದ್ದೇನೆ." ಅದನ್ನು ಕೇಳಿದ ನಾರದನು ಹೇಳಿದನು: "ಅಹೋ! ನೃಪತೇ! ಸಾವಿತ್ರಿಯಿಂದ ಮಹಾ ಪಾಪವೇ ನಡೆದುಹೋಯಿತು! ತಿಳಿಯದೇ ಗುಣವಂತನೆಂದು ಇವಳು ಸತ್ಯವಾನನನ್ನು ವರಿಸಿದ್ದಾಳೆ. ಅವನ ತಂದೆಯು ಸದಾ ಸತ್ಯವನ್ನೇ ನುಡಿಯುತ್ತಾನೆ. ತಾಯಿಯೂ ಸತ್ಯವನ್ನೇ ನುಡಿಯುತ್ತಾಳೆ. ಆದುದರಿಂದಲೇ ಅವನಿಗೆ ಸತ್ಯವಾನನೆಂದು ಬ್ರಾಹ್ಮಣರು ಹೆಸರಿಟ್ಟಿದ್ದಾರೆ. ಬಾಲ್ಯದಲ್ಲಿ ಅವನಿಗೆ ಕುದುರೆಗಳು ಅತಿ ಪ್ರಿಯವಾಗಿದ್ದವು ಮತ್ತು ಅವನು ಕುದುರೆಗಳ ಚಿತ್ರವನ್ನೂ ಬರೆಯುತ್ತಿದ್ದನು. ಅಶ್ವಗಳ ಚಿತ್ರವನ್ನು ಬರೆಯುತ್ತಿದ್ದುದರಿಂದ ಅವನನ್ನು ಚಿತ್ರಾಶ್ವ ಎಂದೂ ಕರೆಯುತ್ತಾರೆ."

ಆಗ ರಾಜನು ಕೇಳಿದನು: "ಆ ನೃಪಾತ್ಮನು ತೇಜಸ್ವಿಯೂ ಬುದ್ಧಿವಂತನೂ ಆಗಿದ್ದಾನೆಯೇ? ಸತ್ಯವಾನನು ಕ್ಷಮಾವಂತನೂ ಶೂರನೂ ಆಗಿದ್ದಾನೆಯೇ?" ನಾರದನು ಹೇಳಿದನು: "ಸತ್ಯವಾನನು ವಿವಸ್ವತನಂತೆ ತೇಜಸ್ವಿಯೂ ಮತಿಯಲ್ಲಿ ಬೃಹಸ್ಪತಿಯ ಸಮನೂ ಆಗಿದ್ದಾನೆ. ಮಹೇಂದ್ರನಂತೆ ಶೂರನೂ ವಸುಧೆಯಂತೆ ಕ್ಷಮಾನ್ವಿತನೂ ಹೌದು."

ಅಶ್ವಪತಿಯು ಹೇಳಿದನು: "ಆ ರಾಜಾತ್ಮಜ ಸತ್ಯವಾನನು ದಾನಿಯೂ ಬ್ರಾಹ್ಮಣರನ್ನು ಗೌರವಿಸುವವನೂ ಆಗಿದ್ದಾನೆಯೇ? ಉದಾರನೂ, ರೂಪವಂತನೂ, ನೋಡಲು ಸುಂದರನೂ ಆಗಿದ್ದಾನೆಯೇ?" ನಾರದನು ಹೇಳಿದನು: "ಸಾಂಕೃತಿ ರಂತಿದೇವನಂತೆ ಅವನು ತನ್ನ ಶಕ್ತಿಗೆ ತಕ್ಕಂತೆ ದಾನಗಳನ್ನು ನೀಡುತ್ತಾನೆ. ಶಿಬಿ ಔಶೀನರನಂತೆ ಬ್ರಾಹ್ಮಣರನ್ನು ಪೂಜಿಸುತ್ತಾನೆ ಮತ್ತು ಸತ್ಯವಾದಿಯಾಗಿದ್ದಾನೆ. ಯಯಾತಿಯಂತೆ ಉದಾರನೂ ಚಂದ್ರನಂತೆ ಸುಂದರನೂ ಆಗಿದ್ದಾನೆ. ದ್ಯುಮತ್ಸೇನನ ಬಲಶಾಲೀ ಮಗನು ರೂಪದಲ್ಲಿ ಇಬ್ಬರು ಅಶ್ವಿನಿಯರಂತಿದ್ದಾನೆ. ಅವನು ತನ್ನ ಆಸೆಗಳನ್ನು ಹಿಡಿತದಲ್ಲಿಟ್ಟುಕೊಂಡವನು. ಮೃದು. ಶೂರ. ಸತ್ಯವಂತ ಮತ್ತು ಜಿತೇಂದ್ರಿಯ. ಅವನು ಸ್ನೇಹಸ್ವಭಾವದವನು, ಅಸೂಯೆಯಿಲ್ಲದವನು. ಸ್ವಲ್ಪ ನಾಚಿಕೆ ಸ್ವಭಾವದವನು ಮತ್ತು ಧೃತಿವಂತನು. ಅವನು ನಿತ್ಯವೂ ನೇರವಾಗಿಯೇ ನಡೆದುಕೊಳ್ಳುತ್ತಾನೆ ಮತ್ತು ಧೃವನಂತೆ ಸ್ಥಿರನಾಗಿದ್ದಾನೆ ಎಂದು ತಪೋವೃದ್ಧರೂ ಶೀಲವೃದ್ಧರೂ ಹೇಳುತ್ತಾರೆ."

ಅಶ್ವಪತಿಯು ಹೇಳಿದನು: "ಭಗವನ್! ಅವನಲ್ಲಿರುವ ಎಲ್ಲ ಒಳ್ಳೆಯ ಗುಣಗಳ ಕುರಿತೇ ನೀವು ಹೇಳುತ್ತಿದ್ದೀರಿ. ಅವನಲ್ಲಿ ಏನಾದರೂ ದೋಷವಿದ್ದರೆ ಅದರ ಕುರಿತೂ ಹೇಳಿ."

ನಾರದನು ಹೇಳಿದನು: "ಅವನಲ್ಲಿ ಒಂದೇ ಒಂದು ದೋಷವಿದೆ. ಬೇರೆ ಏನೂ ಇಲ್ಲ. ಕ್ಷೀಣಾಯು ಸತ್ಯವಾನನು ಇಂದಿನಿಂದ ಒಂದು ವರ್ಷದಲ್ಲಿ ದೇಹತ್ಯಾಗಮಾಡುತ್ತಾನೆ." ಆಗ ರಾಜನು ಸಾವಿತ್ರಿಗೆ ಹೇಳಿದನು: "ಮಗೂ ಸಾವಿತ್ರಿ! ಇಲ್ಲಿ ಬಾ! ಹೋಗಿ ಬೇರೆ ಯಾರನ್ನಾದರೂ ವರಿಸು! ಅವನಲ್ಲಿರುವ ಈ ಮಹಾ ದೋಷವೊಂದೇ ಅವನ ಎಲ್ಲ ಗುಣಗಳನ್ನೂ ಮೀರಿ ನಿಂತಿದೆ. ಭಗವಾನ್ ನಾರದರು ಹೇಳಿದಂತೆ ಒಂದು ವರ್ಷದಲ್ಲಿ ಆ ಅಲ್ಪಾಯುವು ದೇಹತ್ಯಾಗ ಮಾಡುತ್ತಾನೆ!"

ಸಾವಿತ್ರಿಯು ಹೇಳಿದಳು: "ಆಸ್ತಿಯನ್ನು ಒಂದೇ ಬಾರಿ ವಿಂಗಡಿಸುತ್ತಾರೆ. ಕನ್ಯೆಯನ್ನು ಒಂದೇ ಬಾರಿ ಕೊಡುತ್ತಾರೆ. ದಾನವನ್ನು ಒಂದೇ ಬಾರಿ ನೀಡಲಾಗುತ್ತದೆ. ಈ ಮೂರನ್ನೂ ಒಂದೊಂದು ಬಾರಿಯೇ ಮಾಡಲಾಗುತ್ತದೆ. ದೀರ್ಘಾಯುವಾಗಿರಲಿ ಅಥವಾ ಅಲ್ಪಾಯುವಾಗಿರಲಿ, ಸುಗುಣನಾಗಿರಲಿ ಅಥವಾ ನಿರ್ಗುಣನಾಗಿರಲಿ, ನಾನು ಅವನನ್ನು ನನ್ನ ಪತಿಯನ್ನಾಗಿ ವರಿಸಿದ್ದೇನೆ. ಎರಡನೇ ಬಾರಿ ನಾನು ವರಿಸುವುದಿಲ್ಲ! ಮನಸ್ಸಿನಲ್ಲಿ ನಿರ್ಧಾರಮಾಡಿ ನಂತರ ಅದು ಮಾತಿನಲ್ಲಿ ಹೊರಬರುತ್ತದೆ ಮತ್ತು ನಂತರವೇ ಅದನ್ನು ಕ್ರಿಯಾರೂಪದಲ್ಲಿ ಮಾಡಲಾಗುತ್ತದೆ. ಆ ಮನಸ್ಸಿಗೆ ನಾನೇ ಪ್ರಮಾಣ!" ನಾರದನು ಹೇಳಿದನು: "ನರಶ್ರೇಷ್ಠ! ನಿನ್ನ ಮಗಳ ಬುದ್ಧಿಯು ಸ್ಥಿರವಾಗಿದೆ. ಧರ್ಮದಲ್ಲಿ ನೆಲೆಗೊಂಡಿರುವ ಇವಳನ್ನು ಯಾರು ಏನು ಮಾಡಿದರೂ ಬದಲಾಯಿಸಲಾಗುವುದಿಲ್ಲ. ಸತ್ಯವಾನನ ಗುಣಗಳನ್ನು ಪಡೆದ ಅನ್ಯ ಪುರುಷರು ಯಾರೂ ಇಲ್ಲ. ಅದುದರಿಂದ ನಿನ್ನ ಮಗಳನ್ನು ಅವನಿಗೇ ಕೊಡುವುದು ಸರಿಯೆಂದು ನನಗನ್ನಿಸುತ್ತದೆ."

ಮುಂದುವರೆಯುತ್ತದೆ



ಪ್ರಶಾಂತಭಟ್ ಕೋಟೇಶ್ವರ

# ನಿಮ್ಮ ಮನವ ಸಂತೈಸಿಕೊಳ್ಳಿ

ಆ ವ್ಯಕ್ತಿ ಯಾವ ವಸ್ತುವನ್ನು ಮುಟ್ಟಿದರೂ ನೋವಿನಿಂದ ಒದ್ದಾಡುತ್ತಿದ್ದ. ಕೈಯಲ್ಲಿ ಪೆನ್ನು ಹಿಡಿಯಲು ಕೂಡ ಸಾಧ್ಯವಾಗದ, ತನ್ನ ಯಾವುದೇ ಕೆಲಸಗಳನ್ನು ಮಾಡಿಕೊಳ್ಳಲು ಸಾಧ್ಯವಾಗದೆ ಹೋಯಿತು. ಅಂತಿಮವಾಗಿ ವೈದ್ಯರ ಬಳಿ ಆತ ತೆರಳಿದ. ನಾನು ಯಾವುದೇ ವಸ್ತುಗಳನ್ನು ಮುಟ್ಟಿದರೂ ಎತ್ತಿಕೊಳ್ಳಲು ಪ್ರಯತ್ನಿಸಿದರೂ ನನ್ನಿಂದ ಸಾಧ್ಯವಾಗುತ್ತಿಲ್ಲ ಏಕೆ ಎಂದು ಗೊತ್ತಾಗುತ್ತಿಲ್ಲ ಎಂದು ವೈದ್ಯರಲ್ಲಿ ದೂರು ಹೇಳಿದ.

ಕೂಲಂಕುಶವಾಗಿ ಪರಿಶೀಲಿಸಿದ ವೈದ್ಯರು ಅಂತಿಮವಾಗಿ ಎಕ್ಸ್ ರೆ ತೆಗೆದು ನೋಡಿದಾಗ ಆ ವರದಿಯನ್ನು ನೋಡಿ ನಗಬೇಕೋ ಅಳಬೇಕೋ ಎಂದು ಅವರಿಗೆ ತಿಳಿಯದಾಯಿತು . ಕಾರಣ ಇಷ್ಟೇ.. ನೋವಿನಿಂದ ನರಳುತ್ತಿದ್ದ ವ್ಯಕ್ತಿಗೆ ಖುದ್ದು ತನ್ನ ಕೈಬೆರಳು ತಿರುಚಿದಂತೆ ಆಗಿ ಮುರಿದುಹೋಗಿದ್ದು ಶಕ್ತಿ ಕಳೆದುಕೊಂಡಿದೆ ಎಂದು ಅರಿವಾಗಿರಲಿಲ್ಲ. ದೋಷವನ್ನು ತನ್ನಲ್ಲಿ ಇಟ್ಟುಕೊಂಡು ಯಾವ ವಸ್ತುವನ್ನು ಮುಟ್ಟಿದರೂ ಕೈ ಬೆರಳಿಗೆ ನೋವಾಗುತ್ತದೆ ಎಂದು ಹೇಳುವ ಇಂತಹ ಮೂರ್ಖ ಜನರು ನಮ್ಮ ಸಮಾಜದಲ್ಲಿ ಸಾಕಷ್ಟು ಇದ್ದಾರೆ.

ಬದುಕಿನಲ್ಲಿ ಬಹಳಷ್ಟು ವಿಷಯಗಳು ನಮ್ಮ ಕೈಯಲ್ಲಿ ಇರುವುದಿಲ್ಲ ಆದರೆ ನಾವೆಲ್ಲರೂ ಬದುಕಿರುವ ಸಮಾಜದ ಇತಿಮಿತಿಗಳನ್ನು ಅರಿತು ಅವುಗಳನ್ನು ಅಳವಡಿಸಿಕೊಂಡರೆ ನಾವು ಬದುಕಿನಲ್ಲಿ ಹೆಚ್ಚಿನದನ್ನು ಸಾಧಿಸದಿದ್ದರೂ ಪರವಾಗಿಲ್ಲ ಆದರೆ ನೋಡುವವರ ಕಣ್ಣಿಗೆ ವಿಚಿತ್ರವಾಗಿ ತೋರುವುದಿಲ್ಲ. ತನ್ನ ಬದುಕಿನ ಎಲ್ಲಾ ತೊಂದರೆಗಳಿಗೆ ಬೇರೊಬ್ಬರನ್ನು ಹೊಣೆ ಮಾಡುವ, ಅನುಮಾನಿಸುವ, ಅವರ ಮೇಲೆ ಗೂಬೆ ಕೂರಿಸುವ ಮನಸ್ಥಿತಿಯನ್ನು ಹೊಂದಿರುವ ಬಹುತೇಕ ಜನರು ಅವರಿವರಿಂದ ತಮ್ಮ ಬದುಕು ಹಾಳಾಗುತ್ತದೆ ಎಂದು ಭಾವಿಸಿ ಅವರನ್ನು ದೂಷಿಸುತ್ತಾರೆ ಆದರೆ ಅವರಿಗೂ ಗೊತ್ತು ತಮ್ಮ ಬದುಕಿನ ಇಂದಿನ ಪರಿಸ್ಥಿತಿಗೆ ತಮ್ಮ ಬದುಕಿನ ರೀತಿ, ತಾವು ತೆಗೆದುಕೊಂಡ ನಿರ್ಧಾರಗಳು, ಅಪಕ್ವ ನಿಲುವುಗಳು ಕಾರಣ ಎಂದು. ಇದನ್ನು ಗೊತ್ತಿದ್ದು



ಕೂಡ ಅವರು ಬಾಹ್ಯವಾಗಿ ಒಪ್ಪಿಕೊಳ್ಳುವುದಿಲ್ಲ. ನಿಜ ಎಲ್ಲರ ಬದುಕು ಒಂದೇ ರೀತಿಯ ವೇಗದಲ್ಲಿ, ಅಷ್ಟೇ ಸರಳವಾಗಿ ಇರುವುದಿಲ್ಲ. ಕೆಲ ಮಟ್ಟಿಗಿನ ಅನಿಶ್ಚಿತತೆ ಎಲ್ಲರಲ್ಲೂ ತಾಂಡವವಾಡುತ್ತಿರುತ್ತದೆ. ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಯ ಪ್ರಾರಂಭದ 15 ರಿಂದ 20 ವರ್ಷಗಳು ಪಾಲಕರ ಕೈಯಲ್ಲಿ ಇರುತ್ತದೆ ನಿಜ ಆ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಮಕ್ಕಳ ವ್ಯಕ್ತಿತ್ವ ರೂಪುಗೊಂಡರೆ ಮುಂದೆ ಅವರ ಬದುಕಿನ ಹಾದಿ ಚಿತ್ರ ವಿಚಿತ್ರ ತಿರುವುಗಳಲ್ಲಿ ಸಾಗದೆ ಸಮಾಜ ಒಪ್ಪಿತ ಮಾರ್ಗಗಳಲ್ಲಿ ಸಾಗುತ್ತದೆ. ನಾವು ಬದುಕಿರುವುದು ಈ ಸಾಮಾಜಿಕ ವ್ಯವಸ್ಥೆಯ ಅಡಿಯಲ್ಲಿ ಎಂಬ ಕಾರಣಕ್ಕೆ ಬಹುತೇಕ ಜನರು ಈ ಮಾರ್ಗವನ್ನೇ ಆಯ್ದುಕೊಳ್ಳಲು . ಇದು ಸಾಧುವೂ ಹೌದು.

ಇದರಲ್ಲಿ ಸಾಧಕ ಹೆಚ್ಚಾಗಿ ಆಗದಿದ್ದರೂ ಪರವಾಗಿಲ್ಲ ಬಾಧಕಗಳು ಕಡಿಮೆ. ನಮ್ಮನ್ನು ನೋಡುವ ಎಲ್ಲರೂ ನಮ್ಮನ್ನು ಮೆಚ್ಚದೆ ಹೋದರೂ ಪರವಾಗಿಲ್ಲ ನನಗೆ ತಿಳಿದಂತೆ ನಾನು ಬದುಕುತ್ತೇನೆ ಎಂಬ ದಾಷ್ಟಿಕತೆಯಿಂದ ಬದುಕುವವರು ತಮ್ಮ ನಿಲುವುಗಳಿಗೆ ಬದ್ಧರಾಗಿ ಒಳ್ಳೆಯ ಮಾರ್ಗವನ್ನು ಅನುಸರಿಸಿದರೆ ಅದರಲ್ಲಿ ತಪ್ಪಿಲ್ಲ.. ಇಂದಲ್ಲ ನಾಳೆಯಾದರೂ ಸಮಾಜ ಅವರ ವರ್ತನೆಗಳನ್ನು ಒಪ್ಪಿಕೊಳ್ಳುತ್ತದೆ. ಮತ್ತೆ ಕೆಲವರು ತಮ್ಮ ಬದುಕಿನಲ್ಲಿ ತಾವು ತೆಗೆದುಕೊಳ್ಳುವ ಆತುರದ ಹಾಗೂ ದುಡುಕಿನ ನಿರ್ಧಾರಗಳಿಂದ ಒದ್ದಾಡುತ್ತಾರೆ. ಸಾಮಾಜಿಕ,ಆರ್ಥಿಕ, ಕೌಟುಂಬಿಕ ಪರಿಸ್ಥಿತಿಗಳು ಎಷ್ಟೋ ಬಾರಿ ಅವರ ನಿಲುಕಿನಿಂದ ದೂರವಾಗಿದ್ದು ವಿಭಿನ್ನವಾದ ತೊಂದರೆಗಳಿಗೆ ಅವರು ಸಿಲುಕಿಕೊಳ್ಳುತ್ತಾರೆ. ಆದರೆ ಇದೆಲ್ಲಕ್ಕೂ ತಮ್ಮದೇ ತಪ್ಪುಗಳು ಒಂದು ಮಟ್ಟಿಗೆ ಕಾರಣ ಎಂಬುದು ಅವರಿಗೆ ಗೊತ್ತೇ ಆಗುವುದಿಲ್ಲ.

ಕುಣಿಯಲು ಬಾರದಿದ್ದರೆ ನೆಲ ಡೊಂಕು ಎಂಬ ಮಾತಿನಂತೆ ತಮ್ಮ ಬದುಕಿನ ಎಲ್ಲಾ ಅವಘಡಗಳಿಗೆ ಪರರ ಮೇಲೆ ತಪ್ಪು ಹೊರಿಸುವ ಅವರು ತಮ್ಮ ಬದುಕಿನಲ್ಲಿ ಆಗುವ ಒಳ್ಳೆಯ ವಿಷಯಗಳಿಗೆ ಬೇರೆಯವರು ಕಾರಣ ಎಂದು ಎಂದಾದರೂ ಹೇಳುತ್ತಾರೆಯೇ...ಖಂಡಿತವಾಗಿಯೂ ಇಲ್ಲ. ಒಬ್ಬರು ನಮ್ಮ ಒಳಿತಿಗಾಗಿ ಏನನ್ನೂ ಮಾಡುವುದಿಲ್ಲ ಎಂದು ಹೇಳುವುದಾದರೆ ನಮ್ಮ ಕೆಡುಕಿಗೆ ಅವರ ಪಾತ್ರ ಯಾವ ರೀತಿ ಕಾರಣವಾಗುತ್ತದೆ ಎಂಬ ಅರಿವು ಕೂಡ ಇರಬೇಕಲ್ಲವೇ ಅಪವಾದ ಹೊರಿಸುವುದು ಸುಲಭ ಆದರೆ ಆ ಅಪವಾದವನ್ನು ಸಾಬೀತುಪಡಿಸಲು ಅವಶ್ಯಕವಾದ ಸಾಕ್ಷಿಗಳು ಕೂಡ ಬೇಕಲ್ಲವೇ ಎಲ್ಲವನ್ನೂ ಎಲ್ಲರನ್ನೂ ಒಪ್ಪಿಸಬಹುದು ಆದರೆ ಖುದ್ದು ತಮ್ಮ ಮನಸ್ಸಾಕ್ಷಿಯನ್ನು ಒಪ್ಪಿಸಲು ಸಾಧ್ಯವೇ ಉಹೂಂ ಖಂಡಿತವಾಗಿಯೂ ಅದು ಸಾಧ್ಯವಾಗುವುದಿಲ್ಲ.

ಮತ್ತೆ ಕೆಲವೊಮ್ಮೆ ತಮ್ಮದೇ ಹುಚ್ಚು ಮನಸ್ಸಿನ ಕಲ್ಪನೆಗಳನ್ನು ನಿಜವೆಂದು ಭ್ರಮಿಸಿ ಅದನ್ನೇ ನಂಬುತ್ತಾ ಆಗುತ್ತಾರೆ. ಆರಂಭಿಕ ಹಂತದಲ್ಲಿ ಕೇವಲ ಅನುಮಾನ ವಾಗಿರುವ ಈ ರೀತಿಯ ಭ್ರಮೆಗಳು ನಂತರದ ದಿನಗಳಲ್ಲಿ ನಿಜವೇ ಇರಬಹುದು ಎಂದು ಅವರು ಭಾವಿಸುವ ಮಟ್ಟಿಗೆ ಅವರ ಮಾನಸಿಕ ಸ್ಥಿತಿಯನ್ನು ಆಳತೊಡಗುತ್ತವೆ... ಸೂಕ್ತ ಸಮಯದಲ್ಲಿ ಎಚ್ಚರಗೊಳ್ಳದೆ ಹೋದರೆ ಈ ಮಾನಸಿಕ ಸ್ಥಿತಿಯೇ ಮುಂದೆ ಅವರಲ್ಲಿ ದೈಹಿಕ ತೊಂದರೆಯಾಗಿ ಮಾರ್ಪಡುತ್ತದೆ.

ಅವರ ಮನಸ್ಸಿನ ಎಲ್ಲಾ ಒತ್ತಡ, ಭಯ, ಆತಂಕಗಳ ಪರಿಣಾಮವಾಗಿ ಅವರಲ್ಲಿ ಉಂಟಾಗುವ ಮನೋದೈಹಿಕ ತೊಂದರೆಗಳು ಅವರನ್ನು ಇನ್ನಿಲ್ಲದಂತೆ ಕಾಡಿದಾಗ ಅದಕ್ಕೂ ಕೂಡ ಬೇರೆಯವರನ್ನು ಹೊಣೆಯಾಗಿಸುತ್ತ ಅವರು ಸಾಗುತ್ತಾರೆ. ಅವರ ಪಾಲಿಗೆ ಬೇರೆಯವರು ಇರುವುದೇ ತಮ್ಮ ಬದುಕನ್ನು ಹಾಳು ಮಾಡಲು ಎಂಬ ಮಾನಸಿಕತೆ ಉಂಟಾಗುತ್ತದೆ.

ಆದರೆ ಒಂದೊಮ್ಮೆ ಆರಂಭದಲ್ಲಿ ಅಥವಾ ಮಧ್ಯದಲ್ಲಿಯೇ ಆಗಲಿ ಹೀಗೆ ಎಲ್ಲರನ್ನು ಅನುಮಾನಿಸುತ್ತಾ ತಮ್ಮ ಮಾತುಗಳಿಗೆ ಸಹಮತ ತೋರುವವರನ್ನು ಸರಿಯಾದವರೆಂದೂ, ಒಪ್ಪದೇ ಇರುವವರ ಕುರಿತು ತಪ್ಪು ಅಭಿಪ್ರಾಯ ಹೊಂದುವುದು ತಮ್ಮ ಜನ್ಮ ಸಿದ್ಧ ಹಕ್ಕು ಎಂಬಂತೆ ಮಾತನಾಡುತ್ತಾರೆ.

ಅಂತಹವರಿಗೆ ಸೂಕ್ತ ಸಮಾಲೋಚನೆಯ ಅಗತ್ಯವಿದೆ. ನುರಿತ ಮಾನಸಿಕ ಸಮಾಲೋಚನಾ ತಜ್ಞರ ಜೊತೆಗಿನ ಸಮಾಲೋಚನೆಯಲ್ಲಿ ಅವರ ಮಾನಸಿಕ ಸ್ಥಿತಿಗತಿಗಳಲ್ಲಿ ಸ್ವಲ್ಪಮಟ್ಟಿಗಿನ ಸುಧಾರಣೆಯನ್ನು ನಾವು ಕಾಣಬಹುದು..... ಇದಕ್ಕೆ ಅವರು ಮನಸ್ಸು ಮಾಡಬೇಕಷ್ಟೇ.

ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸಿದಾದೆನು ನಮ್ಮೊಳಗೆ ಎಂದು ನಮ್ಮ ಕನ್ನಡದ ರಾಷ್ಟ್ರಕವಿ ಜಿ ಎಸ್ ಶಿವರುದ್ರಪ್ಪನವರು ಹೇಳಿದ್ದಾರೆ. ಅವರ ಮಾತು ನೂರಕ್ಕೆ ನೂರು ಸತ್ಯ. ನಮ್ಮ ಮನದಲ್ಲಿರುವ ಪ್ರೀತಿ ಸ್ನೇಹಗಳೇ ನಿಜವಾದ ದೈವತ್ವಕ್ಕೆ ಹಾದಿ ಎಂದು ಅವರು ಹೇಳಿದ್ದಾರೆ.

ಮುಂದುವರೆದು ಕವಿ ಈ ಕವನದಲ್ಲಿ ನಮ್ಮ ಬದುಕನ್ನು ಸ್ವರ್ಗವಾಗಿಸಿಕೊಳ್ಳುವುದು ನರಕವಾಗಿಸಿಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆ. ನಮ್ಮ ಒಳಗಿನ ತಿಳಿಯನ್ನು ಕಲಕದೇ ಇದ್ದರೆ ನಾಲಿಗೆಗೆ ಅಮೃತದ ಸವಿಯಿದೆ ಎಂದು ಹೇಳುವ ಕವಿಗಳು ತನ್ನ ಅಹಂಕಾರದ ಕೋಟೆಯಲ್ಲಿ ಬಂಧಿಯಾಗಿರುವ ಮನುಷ್ಯ ಸತ್ಯವನ್ನು ಅರಿಯದೆ ಹೋಗುತ್ತಾನೆ. ಇರುವ ನಾಲ್ಕು ದಿನದ ಬದುಕಿನಲ್ಲಿ ಹೊಂದಾಣಿಕೆ ಅತ್ಯ ಗತ್ಯ ಎಂಬ ನಿಲುವನ್ನು ಕವಿ ದೃಢಪಡಿಸುತ್ತಾರೆ. ನಮ್ಮ ಸುತ್ತಲಿನ ಜನರ ಪ್ರೀತಿ ವಿಶ್ವಾಸವನ್ನು ಹೊಂದಲು ನಾವು ಕೂಡ ಅಂತಹದ್ದೇ ವ್ಯಕ್ತಿತ್ವವನ್ನು ರೂಪಿಸಿಕೊಳ್ಳೋಣ.... ಅಂತಹ ಹೊಂದಾಣಿಕೆ ನಮ್ಮೆಲ್ಲರಲ್ಲೂ ಹಾಸು ಹೊಕ್ಕಾಗಿರಲಿ ಎಂಬ ಆಶಯದೊಂದಿಗೆ



ವೀಣಾ ಹೇಮಂತ್ ಗೌಡ ಪಾಟೀಲ್

## ವಿದೇಶಿ ಪಂದ್ಯಗಳ ಪ್ರವಾಸಕ್ಕೆ ಸೂರ್ಯವಂಶಿ ಜೊತೆ ಪೋಷಕರಿಗೂ ಅನುಮತಿ




ನವದೆಹಲಿ: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವೈಭವ್ ಸೂರ್ಯವಂಶಿ ಅವರ ಪೋಷಕರನ್ನು ಶ್ರೀಲಂಕಾ ಮತ್ತು ಯುನೈಟೆಡ್ ಕಿಂಗ್‌ಡಮ್ ಪ್ರವಾಸಗಳಿಗೆ 15 ವರ್ಷದ ಬಾಲಕನೊಂದಿಗೆ ಪ್ರಯಾಣಿಸಲು ವಿನಂತಿಸಿದೆ. ರಾಷ್ಟ್ರೀಯ ಆಯ್ಕೆದಾರರು ವೈಭವ್ ಅವರನ್ನು ಟಿ 20 ಐ ತಂಡಕ್ಕೆ ಕರೆದ ನಂತರ ಮಂಡಳಿಯ ಈ ವಿನಂತಿ ಬಂದಿದೆ.

ಯುವ ವೈಭವ್‌ಗಾಗಿ ಬಿಸಿಸಿಐ ವಿಶೇಷ ನಿಬಂಧನೆಗಳನ್ನು ಮಾಡಿದೆ, ಅವರು ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿಗೆ ವಯಸ್ಕ ತಂಡಕ್ಕೆ ಸೇರಲಿದ್ದಾರೆ. ಈ ಯುವಕ ಭಾರತಕ್ಕಾಗಿ ಅತ್ಯಂತ ಕಿರಿಯ ಚೊಚ್ಚಲ ಆಟಗಾರನಾಗಬಹುದು, 16 ವರ್ಷ ಮತ್ತು 207 ದಿನಗಳಲ್ಲಿ ಚೊಚ್ಚಲ ಪ್ರವೇಶ ಮಾಡಿದ ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಮೀರಿಸಿದ್ದಾರೆ. ಈ ಕುರಿತಂತೆ ಮಾತನಾಡಿದರು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು, ಮಂಡಳಿಯು ಸಾಮಾನ್ಯವಾಗಿ ಪೋಷಕರು ಆಟಗಾರರೊಂದಿಗೆ ಪ್ರವಾಸಗಳಿಗೆ ಹೋಗಲು ಅನುಮತಿಸುವುದಿಲ್ಲವಾದರೂ, ಭಾರತವು ವಿಶೇಷ ಪ್ರತಿಭೆಯನ್ನು ರಾಷ್ಟ್ರೀಯ ಮಡಿಲಿಗೆ ತರಲು ಪ್ರಯತ್ನಿಸುತ್ತಿರುವುದರಿಂದ ವೈಭವ್ ಮತ್ತು ಅವರ ಕುಟುಂಬಕ್ಕೆ ವಿಶೇಷ ಅನುಮತಿ ನೀಡಲಾಗಿದೆ ಎಂದು ಹೇಳಿದರು. ಅವನನ್ನು ಭಾರತ ಎ ತಂಡದಿಂದ ಶ್ರೀಲಂಕಾಕ್ಕೆ ಹಿರಿಯರ ತಂಡಕ್ಕೆ ಹೋಗಲು ಆಯ್ಕೆ ಮಾಡಲಾಗಿದೆ. ಅವನು ಚಿಕ್ಕ ಮಗುವಾಗಿರುವುದರಿಂದ, ಅವನು ಇನ್ನೂ ಅಪ್ರಾಪ್ತ ವಯಸ್ಕ. ಅವನು ಪುರುಷರ ತಂಡದೊಂದಿಗೆ ಪ್ರಯಾಣಿಸುವಾಗ, ಎಲ್ಲರೂ ವಯಸ್ಕರು, ಆದ್ದರಿಂದ, ಅವನ ಪೋಷಕರು ಅಥವಾ ಕುಟುಂಬದ ಯಾರಾದರೂ ಅವನೊಂದಿಗೆ ಶ್ರೀಲಂಕಾಕ್ಕೆ ಪ್ರಯಾಣಿಸುವುದು ಸೂಕ್ತವೆಂದು ನಾವು ಭಾವಿಸುತ್ತೇವೆ ಎಂದು ಸೈಕಿಯಾ ಹೇಳಿದರು. ನಾವು ಅವನ ಪೋಷಕರಿಗೆ ವಿನಂತಿಸುತ್ತೇವೆ. ಅವರು ಹೋಗಲು ಸಿದ್ಧರಿದ್ದರೆ, ಅವರು ಹೋಗಬಹುದು. ವಾಸ್ತವವಾಗಿ, ಅವನ ತಂದೆ ನಾಳೆ ಶ್ರೀಲಂಕಾಕ್ಕೆ ಪ್ರಯಾಣಿಸುತ್ತಿದ್ದಾರೆ. ಅದು ನಮ್ಮ ಆಲೋಚನೆ. ಮತ್ತು ಅದರ ನಂತರ, ಅವನ ಪೋಷಕರು ಸಹ ಇಂಗ್ಲೆಂಡ್‌ಗೆ ಹೋಗಲು ಬಯಸಿದರೆ, ಅವನು ಮಗುವಾಗಿರುವುದರಿಂದ ಬಿಸಿಸಿಐ ಅದನ್ನು ಬೆಂಬಲಿಸುತ್ತದೆ. ಆದ್ದರಿಂದ, ಹಿರಿಯ ಹುಡುಗರೊಂದಿಗೆ ಹೊಂದಿಕೊಳ್ಳಲು ಅವನಿಗೆ ಸ್ವಲ್ಪ ಸಮಯ ಬೇಕಾಗುತ್ತದೆ. ಆದ್ದರಿಂದ, ಆ ದೃಷ್ಟಿಕೋನದಿಂದ, ನಾವು ಸಹಾಯ ಮಾಡುತ್ತಿದ್ದೇವೆ. ಇದು ಎಲ್ಲಾ ಪೋಷಕರಿಗೆ ನಾವು ಅನುಮತಿಸುವ ವಿಷಯವಲ್ಲ ಎಂದಿದ್ದಾರೆ. ವೈಭವ್ ಸೂರ್ಯವಂಶಿ ಅವರ ಅದ್ಭುತ ಪ್ರದರ್ಶನವು ಭಾರತೀಯ ಆಯ್ಕೆದಾರರು ಅವರನ್ನು ರಾಷ್ಟ್ರೀಯ ತಂಡಕ್ಕೆ ಸೇರಿಸಿಕೊಳ್ಳಲು ಒತ್ತಾಯಿಸಿತು. ವೈಭವ್ ಈಗಾಗಲೇ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಕೇವಲ 23 ಪಂದ್ಯಗಳಲ್ಲಿ ಸಾವಿರಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಚೆಂಡನ್ನು ಬಲವಾಗಿ ಹೊಡೆಯುವ ಅವರ ಸಾಮರ್ಥ್ಯ ಮತ್ತು ಕಠಿಣ ಪರಿಸ್ಥಿತಿಗಳನ್ನು ನಿಭಾಯಿಸುವ ಅವರ ಮನೋಧರ್ಮವು ಅವರನ್ನು 20 ಆರಂಭಿಕ ಸ್ಥಾನಕ್ಕೆ ನೆಚ್ಚಿನ ಆಟಗಾರರನ್ನಾಗಿ ಮಾಡಿದೆ.

## ಮಳೆಯಿಂದಾಗಿ ತರಕಾರಿ ಬೆಲೆಯಲ್ಲಿ ದಿಢೀರ್ ಏರಿಕೆ



ಬೆಂಗಳೂರು: ರಾಜ್ಯದ ವಿವಿಧೆಡೆ ಸುರಿಯುತ್ತಿರುವ ಮಳೆಯಿಂದಾಗಿ ತರಕಾರಿಗಳ ಬೆಲೆ ಗಗನಕ್ಕೇರಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬೀಳುತ್ತಿದೆ. ಹೆಚ್ಚಾಗಿ ತರಕಾರಿ ಬೆಳೆಯುವ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಪ್ರದೇಶಗಳಲ್ಲಿ ಕಳೆದ ಕೆಲವು ದಿನಗಳಿಂದ ಮಳೆಯಾಗುತ್ತಿದ್ದು, ತರಕಾರಿ ಬೆಳೆಗಳು ನಾಶವಾಗಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ.

ಕಳೆದ ಕೆಲವು ದಿನಗಳಿಂದ 180 ರೂ.ಗಳ ಆಸುಪಾಸಿನಲ್ಲಿದ್ದ ಹುರಳಿಕಾಯಿ ತುಸು ಇಳಿಕೆಯಾಗಿದ್ದು, ಕೆಜಿಗೆ 100-120 ರೂ.ಗೆ ಇಳಿದಿದ್ದು ಗ್ರಾಹಕರು ತುಸು ನಿರಾಳವಾಗಿದ್ದಾರೆ. ಆದರೆ ಟೊಮ್ಯಾಟೋ ಅರ್ಧಶತಕ ಬಾರಿಸಿ ಮುನ್ನುಗ್ಗುತ್ತಿದೆ. ಕೆಜಿಗೆ 50 ರೂ.ಗಳಿಂದ 60 ರೂ.ಗಳಿಗೆ ಮಾರಾಟವಾಗುತ್ತಿದೆ. ಮಧ್ಯಪ್ರಾಚ್ಯದಲ್ಲಿನ ಯುದ್ಧದಿಂದಾಗಿ ಪೆಟ್ರೋಲ್, ಡೀಸೆಲ್ ಗಗನಕ್ಕೇರಿದ್ದು, ಸಾಗಾಟ ವೆಚ್ಚ ದುಬಾರಿಯಾಗಿದ್ದರಿಂದ ಇದರ ಹೊರೆ ಗ್ರಾಹಕರ ಮೇಲೆ ಬೀಳುತ್ತಿದ್ದು, ಇಲ್ಲಿ ರೈತರು ಮತ್ತು ಗ್ರಾಹಕರಿಗೆ ನಷ್ಟವಾಗುತ್ತಿದ್ದರೆ, ಮಂಡಿ ಮಾಲೀಕರು, ದಲ್ಲಾಳಿಗಳಿಗೆ ಲಾಭವಾಗುತ್ತಿದೆ. ಬೀನ್ಸ್ ? 80 ರಿಂದ 100 ರೂ., ಟೊಮ್ಯಾಟೊ- 50 ರಿಂದ 60 ರೂ., ಬೀಟರೂಟ್-50 ರೂ., ಎಲೆಕೋಸು-50 ರೂ., ಮೂಲಂಗಿ-ರೂ., ಹೀರೇಕಾಯಿ- 50 ರೂ.,ಕ್ಯಾಪ್ಸಿಕಂ-80 ರೂ., , ಹಸಿಮೆಣಸಿನಕಾಯಿ-80 ರೂ.ಗೆ ಮಾರಾಟವಾಗುತ್ತಿದೆ. ಸೊಪ್ಪುಗಳ ಬೆಲೆಯಲ್ಲೂ ಸಹ ಏರಿಕೆಯಾಗಿದ್ದು, ಮೆಂತ್ಯೆ ಒಂದು ಕಟ್‌ಗೆ 30 ರೂ., ಕೊತ್ತುಂಬರಿ-50 ರೂ., ಪಾಲಾಕ್-30 ರೂ., ದಂಟು- 30 ರೂ.ಗೆ ಮಾರಾಟವಾಗುತ್ತಿದೆ **.ಈರುಳ್ಳಿ ಕುಸಿತ** ಕಳೆದ ಕೆಲವು ತಿಂಗಳುಗಳಿಂದ ಈರುಳ್ಳಿ ಬೆಲೆ ಕುಸಿತವಾಗಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ. ಗುಣಮಟ್ಟದ ಈರುಳ್ಳಿ ಕೆಜಿಗೆ 20 ರಿಂದ 25 ರೂ.ಗೆ ಮಾರಾಟವಾಗುತ್ತಿದೆ. 100 ರೂ.ಗೆ 5 ಕೆಜಿ ಮಾರಾಟವಾಗುತ್ತಿದ್ದು, ಮಾರುಕಟ್ಟೆಯಲ್ಲಿ ಇನ್ನೂ ಕಡಿಮೆ ಬೆಲೆ ಇದೆ. ದಾವಣಗೆರೆ, ಬಳ್ಳಾರಿ, ರಾಯಚೂರು, ಚಿತ್ರದುರ್ಗ ಸೇರಿದಂತೆ ಮತ್ತಿತರ ಜಿಲ್ಲೆಗಳಿಂದ ಬೆಂಗಳೂರಿನ ಆರ್‌ಎಂಸಿ ಯಾರ್ಡ್‌ಗೆ ಅಪಾರ ಪ್ರಮಾಣದಲ್ಲಿ ಈರುಳ್ಳಿ ಬರುತ್ತಿದ್ದು, ಬೆಲೆ ಕುಸಿತಕ್ಕೆ ಕಾರಣವಾಗಿದೆ. ಕಳೆದ 2-3 ತಿಂಗಳಿನಿಂದಲೂ ಸಹ ಈರುಳ್ಳಿ ಬೆಲೆ ಮೇಲೇಳದೆ ಸ್ಥಿರತೆಯನ್ನು ಕಾಯ್ದುಕೊಂಡಿದ್ದು, ಬೆಳೆಗಾರರ ಕಣ್ಣಲ್ಲಿ ನೀರು ತರಿಸುತ್ತಿದೆ.ಉ.ಕರ್ನಾಟಕ ಭಾಗದಲ್ಲಿ ಮಳೆಯಾಗುತ್ತಿದ್ದು, ಬಿತ್ತನೆಯಾಗಿರುವ ಬೆಳೆ ನಾಶವಾಗಿದ್ದು, ಮುಂದಿನ ದಿನಗಳಲ್ಲಿ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ.

# ಸಿಎಂ ಆಗಿ ತವರಿಗೆ ಬಂದ ಡಿಕೆಶಿಗೆ ಅದ್ದೂರಿ ಸ್ವಾಗತ, ಮೆಟ್ರೋದಲ್ಲಿ ಪ್ರಯಾಣ

ಬೆಂಗಳೂರು: ತವರು ಕ್ಷೇತ್ರ ಕನಕಪುರದ ಮತದಾರರಿಗೆ ಕೃತಜ್ಞತಾ ಸಮರ್ಪಣ ಸಮಾವೇಶಕ್ಕೆ ತೆರಳಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಮ ಮೆಟ್ರೋ ಅವಲಂಬಿಸಿದರು.

ಇಂದು ಬೆಳಗ್ಗೆ ತಮ ಮನೆಯಿಂದ ಹೊರಟು ವಿಧಾನಸೌಧಕ್ಕೆ ತೆರಳಿ, ಅಲ್ಲಿಂದ ಮೆಟ್ರೋದಲ್ಲಿ ಕನಕಪುರ ರಸ್ತೆಯ ಕೊನೆ ನಿಲ್ದಾಣ ತಲಘಟ್ಟಪುರದ ರೇಷೆ ಸಂಸ್ಥೆವರೆಗೂ ಪ್ರಯಾಣ ಬೆಳೆಸಿದರು.

ಮೆಟ್ರೋ ಪ್ರಯಾಣದಿಂದ ಸಮಯವೂ ಉಳಿತಾಯವಾಗುತ್ತದೆ. ಎಲೆಕ್ಟ್ರಾನಿಕ್‌ಸಿಟಿಗೆ ತೆರಳುವಾಗ ಮೆಟ್ರೋದಲ್ಲಿ ಹೋಗುವುದು ಬಹಳ ಅನುಕೂಲಕರವಾಗಿದೆ. ಇನ್ನು ಮುಂದೆ ಈ ಬಗ್ಗೆ ಹೆಚ್ಚು ಗಮನಹರಿಸಬೇಕೆಂದು ಹೇಳಿದರು. ಈ ವೇಳೆ ಜೊತೆಯಲ್ಲಿದ್ದ ಅಧಿಕಾರಿಗಳು ಮೆಟ್ರೋ ಪ್ರಯಾಣದಿಂದಾಗುವ ಅನುಕೂಲಗಳ ಕುರಿತು ಮುಖ್ಯಮಂತ್ರಿಯವರಿಗೆ ವಿವರಿಸಿದರು. ಯಾವುದೇ ವಿಐಪಿ ಶಿಷ್ಟಾಚಾರಗಳಿಲ್ಲದೇ ಸಾಮಾನ್ಯರಂತೆ ಮುಖ್ಯಮಂತ್ರಿ ರೈಲಿನಲ್ಲಿ ಪ್ರಯಾಣಿಸಿದರು. ಸಹ ಪ್ರಯಾಣಿಕರ ಜೊತೆ ಸಮಾಲೋಚನೆ ನಡೆಸಿದರು. ಕೈ ಕುಲುಕಿ ಅಭಿನಂದನೆ ಸಲ್ಲಿಸಿದರು. ಮೆಟ್ರೋದಲ್ಲಿದ್ದ ಮಗುವೊಂದಕ್ಕೆ ಚಾಕೊಲೇಟ್ ನೀಡಿದರು. ಸಹ




ಪ್ರಯಾಣಿಕರು ಮುಖ್ಯಮಂತ್ರಿಯವರ ಜೊತೆ ಸೆಲ್ಫಿ ತೆಗೆದುಕೊಂಡು ಕೈ ಕುಲುಕಿ ಧನ್ಯತಾಭಾವ ಪ್ರದರ್ಶಿಸಿದರು.

ಯಾವುದೇ ಹಮು-ಬಿಮ್ಮು ಇಲ್ಲದೇ ನಗು ಮುಖದಿಂದ ಎಲ್ಲಾ ಪ್ರಯಾಣಿಕರೊಂದಿಗೆ ಬೆರೆಯುವ ಮೂಲಕ ಡಿ.ಕೆ.ಶಿವಕುಮಾರ್ ಗಮನ ಸೆಳೆದರು. ಕೆಲವರು ಫೋಟೋ ತೆಗೆದುಕೊಳ್ಳಲು ಕಷ್ಟಪಡುವುದನ್ನು ಕಂಡು ಮುಖ್ಯಮಂತ್ರಿಯವರೇ ಮೊಬೈಲ್ ಪಡೆದು ಫೋಟೋ ತೆಗೆದು ಕೊಟ್ಟರು. ನಂತರ ಕೊನೆಯ ನಿಲ್ದಾಣದಲ್ಲಿ ಇಳಿದು ಕಾರಿನಲ್ಲಿ ಕನಕಪುರಕ್ಕೆ ಪ್ರಯಾಣಿಸಿದರು. ಮುಖ್ಯಮಂತ್ರಿ ಹಾಗೂ ಅವರ ಕಚೇರಿಯ ಸಿಬ್ಬಂದಿಗಳ ಮೆಟ್ರೋ ಪ್ರಯಾಣದಿಂದ ಬೆಂಗಳೂರಿನಲ್ಲಿ ಜೀರೋ ಟ್ರಾಫಿಕ್‌ನಿಂದ ಜನರಿಗಾಗುವ ಸಮಸ್ಯೆ ತಗ್ಗಿದ್ದು, ಮೆಚ್ಚುಗೆಗೆ ಪಾತ್ರವಾಯಿತು.

ನಂತರ ಕನಕಪುರ ವಿಧಾನಸಭಾ ಕ್ಷೇತ್ರದ ಹಾರೋಹಳ್ಳಿ ಸರ್ಕಲ್, ತುಂಗಣಿ, ಟಿ.ಬೇಕುಪ್ಪೆ ಸರ್ಕಲ್, ನಾರಾಯಣಪುರ, ಕೋಡಿಹಳ್ಳಿ, ಹೇರಿಂದ್ಯಾಪನಹಳ್ಳಿ, ಕೊಳಗೊಂಡನಹಳ್ಳಿ, ಹುಣಸನಹಳ್ಳಿ, ಹೊಸ ದುರ್ಗಾ, ಹೂಕುಂದ, ಮುಳ್ಳಳ್ಳಿ, ನಳ್ಳಳ್ಳಿ, ದೊಡ್ಡ ಆಲಹಳ್ಳಿ, ಸಾತನೂರು, ಕಬ್ಬಾಳು, ಕುರುಬರಹಳ್ಳಿ ಗೇಟ್, ಸೋಮದ್ಯಾಪನಹಳ್ಳಿ, ಹಳ್ಳಿ ಮಾರನ ಹಳ್ಳಿ, ಹಳೇ ಪೊಲೀಸ್ ಸ್ಟೇಷನ್ ಸರ್ಕಲ್, ಮೇಗಳ ಬೀದಿ, ಕನಕಪುರ ನಗರ, ಚನಬಸಪ್ಪನ ಸರ್ಕಲ್ ಸೇರಿದಂತೆ ಹಲವು ಕಡೆಗಳಲ್ಲಿ ಡಿ.ಕೆ.ಶಿವಕುಮಾರ್ ರೋಡ್ ಶೋ ಹಾಗೂ ಜನ ಸಂಪರ್ಕ ಸಭೆಗಳನ್ನು ನಡೆಸಿದರು.

ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ತವರು ಕ್ಷೇತ್ರಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸಲು ಜನ ಸಾಗರವೇ ನೆರೆದಿತ್ತು. ಮನೆಯ ಮಗ ಉನ್ನತ ಹುದ್ದೆಗೇರಿದ ಸಂಭ್ರಮ ಪ್ರತಿಯೊಬ್ಬರ ಮುಖದಲ್ಲೂ ಎದ್ದು ಕಾಣುತ್ತಿತ್ತು. ಮುಖ್ಯಮಂತ್ರಿಯ ಭೇಟಿ ಹಿನ್ನೆಲೆಯಲ್ಲಿ ಫ್ಲೆಕ್?ಸ ಮತ್ತು ಬ್ಯಾನರ್‌ಗಳು ರಾರಾಜಿಸುತ್ತಿದ್ದವು. ಕನಕಪುರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

# ಕೊಪ್ಪಳ : ಅಕ್ಕ-ತಂದೆ ಕೊಂದು ತಾಯಿ ಇರಿದು ಆತ್ಮಹತ್ಯೆಗೆ ಯತ್ನಿಸಿದ ಮಗ

ಕೊಪ್ಪಳ: ಆ ಹುಡುಗನಿಗೆ ಇನ್ನೂ 18 ವರ್ಷ. ಆತನಿಗೆ ತನ್ನ ಕುಟುಂಬದವರ ಮೇಲೆ ಅದೇನು ಕೋಪವಿತ್ತೊ ಗೊತ್ತಿಲ್ಲ. ರಾತ್ರೋರಾತ್ರಿ ಮನೆಗೆ ಬಂದವನೇ ಜಗಳ ತೆಗೆದು ದೀಪ ನಂದಿಸಿ ಮನೆಯಲ್ಲಿದ್ದವರಿಗೆಲ್ಲ ಇರಿದು, ಕೊನೆಗೂ ತಾನೂ ಚಾಕುವಿನಿಂದ ಕುತ್ತಿಗೆ ಕೊಯ್ದುಕೊಂಡು ಆತಹತ್ಯೆಗೆ ಯತ್ನಿಸಿದ್ದಾನೆ. ಆತನ ರೌದ್ರಾವತಾರಕ್ಕೆ ತಂದೆ ಮತ್ತು ಅಕ್ಕ ಸಾವನ್ನಪ್ಪಿದ್ದು, ತಾಯಿ ಹಾಗೂ ಪಾಪಿ ಪುತ್ರ ಗಂಭೀರವಾಗಿ ಗಾಯಗೊಂಡಿದ್ದು, ಜೀವನರಣದ ನಡುವೆ ಆಸ್ಪತ್ರೆಯಲ್ಲಿ ಹೋರಾಟ ನಡೆಸುವಂತಾಗಿದೆ.

ಅರೇ?ಇದೇನು ಇಂತಹ ಘಟನೆ ನಿಜಜೀವನದಲ್ಲಿ ನಡೆಯುವುದು ಸಾಧ್ಯವೇ? ಇದು ಸಿನಿಮಾ ಸ್ಟೋರಿ ಇರಬಹುದು ಎಂದುಕೊಂಡರೆ ನಿಮ ಊಹೆ ತಪ್ಪು, ಇದು ಕಥೆಯಲ್ಲ ಕಟು ಸತ್ಯ. ಇಂತಹ ಘನಘೋರ ಕೃತ್ಯ ನಡೆದಿರುವುದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಹೊಸ ಅಯೋಧ್ಯೆ ಗ್ರಾಮದಲ್ಲಿ. ಹೌದು ಇಂತಹ ಘನಘೋರ ಕೃತ್ಯ ಮಾಡಿರುವ ವ್ಯಕ್ತಿಯನ್ನು 18 ವರ್ಷದ ಸಾಯಿ ವೆಂಕಟರಮಣಿ ಎಂದು ಗುರುತಿಸಲಾಗಿದೆ. ಆತನ



ಕ್ರೌರ್ಯಕ್ಕೆ ಆತನ ತಂದೆ ವೆಂಕಟ ನಾಯ್ಡು ಹಾಗೂ ಅಕ್ಕ ಪ್ರಗತಿ(19) ಬಲಿಯಾಗಿದ್ದರೆ, ತಾಯಿ ಸೌಜನ್ಯ(40) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೂವರನ್ನು ಇರಿದ ನಂತರ ವೆಂಕಟರಮಣಿ ಅದೇ ಚಾಕುವಿನಿಂದ ತಾನು ಕತ್ತು ಕೊಯ್ದುಕೊಂಡಿದ್ದು, ಆತನನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ನಡೆದದ್ದು ಹೀಗೆ: ಹೊಸ ಅಯೋಧ್ಯೆ ಗ್ರಾಮದ ವೆಂಕಟನಾಯ್ಡು ಅವರದ್ದು ಚಿಕ್ಕ ಹಾಗೂ ಚೊಕ್ಕ ಸಂಸಾರ ಪತ್ನಿ, ಪುತ್ರ ಹಾಗೂ ಪುತ್ರಿಯೊಂದಿಗೆ ಅವರು ನೆಮದಿಯ ಜೀವನ ಸಾಗಿಸುತ್ತಿದ್ದರು. ನಾಯ್ಡು ಹಾಸ್ಟೆಲ್ ಒಂದರಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದರು. ಆತನ ಪತ್ನಿ ಸೌಜನ್ಯ ಗೃಹಿಣಿಯಾಗಿದ್ದಾರೆ ಮೊದಲ ಪುತ್ರಿ ಪ್ರಗತಿ ಬಿಕಾಂ ವ್ಯಾಸಂಗ ಮಾಡುತ್ತಿದ್ದರೆ, ಪುತ್ರ ಸಾಯಿ ವೆಂಕಟರಮಣಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾನೆ. ಇಂತಹ ಸುಖಿ ಕುಟುಂಬದ ಮೇಲೆ ಅದೇನೂ ವಕ್ರದೃಷ್ಟಿ ಬಿತ್ತೋ ಯಾರಿಗೂ ಗೊತ್ತಿಲ್ಲ. ನಿನ್ನೆ ರಾತ್ರಿ 9.30 ರ ಸುಮಾರಿಗೆ ಮನೆಗೆ ಬಂದ ಸಾಯಿ ವೆಂಕಟರಮಣಿ ದೆವ್ವ ಬಂದವನಂತೆ ವರ್ತಿಸುತ್ತ ಮನೆಯಲ್ಲಿದ್ದವರ ಮೇಲೆಲ್ಲಾ ಜಗಳ ತೆಗೆದಿದ್ದಾನೆ. ನಂತರ ಆತ ಮನೆಯ ಲೈಟ್ ಆಫ್ ಮಾಡಿ ಅಕ್ಕ ಪ್ರಗತಿ ಮೇಲೆ ಚಾಕುವಿನಿಂದ ಮನಬಂದತೆ ಇರಿದಿದ್ದಾನೆ, ಮಗಳ ಆಕ್ರಂದನ ಕೇಳಿಸಿಕೊಂಡು ಓಡಿ ಬಂದ ತಾಯಿಗೂ ಇರಿದಿದ್ದಾನೆ, ಜೊತೆಗೆ ತಂದೆಯ ಮೇಲೂ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ನಂತರ ತಾನೂ ಕತ್ತು ಕೊಯ್ದುಕೊಂಡು ಆತಹತ್ಯೆಗೆ ಯತ್ನಿಸಿದ್ದಾನೆ.

ತಕ್ಷಣ ಅಕ್ಕಪಕ್ಕದವರು ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಪ್ರಗತಿ ಹಾಗೂ ವೆಂಕಟನಾಯ್ಡು ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಸೌಜನ್ಯ ಹಾಗೂ ಆರೋಪಿ ವೆಂಕಟರಮಣಿಯನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರಿಬ್ಬರೂ ಜೀಮನರಣದ ನಡುವೆ ಹೋರಾಟ ನಡೆಸುತ್ತಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

**ಕಾರಣ ನಿಗೂಢ;**

ನಾಲ್ಕು ಮಂದಿ ಇದ್ದ ವೆಂಕಟ ನಾಯ್ಡು ಕುಟುಂಬ ಸುಖಿಕುಟುಂಬವಾಗಿತ್ತು. ಎಲ್ಲರೂ ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದರು. ಆದರೆ, ದಿಢೀರನೆ ಮಗ ವೆಂಕಟರಮಣಿ ಮೈಮೇಲೆ ದೆವ್ವ ಬಂದವನಂತೆ ವರ್ತಿಸಿ ಎಲ್ಲರನ್ನು ಇರಿದು ಕೊಲೆ ಮಾಡಿ ತಾನು ಆತಹತ್ಯೆಗೆ ಯತ್ನಿಸಿರುವುದು ಏಕೆ ಎನ್ನುವುದಕ್ಕೆ ಇನ್ನು ಕಾರಣ ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಕಾಂ ವ್ಯಾಸಂಗ ಮಾಡುತ್ತಿದ್ದ ಅಕ್ಕ ಪ್ರಗತಿ ಯಾರನ್ನಾದರೂ ಪ್ರೀತಿಸುತ್ತಿದ್ದಳೇ ಎನ್ನುವ ವಿಚಾರದಲ್ಲಿ ಆತ ಇಂತಹ ಪೈಶಾಚಿಕ ಕೃತ್ಯಕ್ಕೆ ಕೈ ಹಾಕಿರುವ ಸಾಧ್ಯತೆ ಇದ್ದು, ಆ ನಿಟ್ಟಿನಲ್ಲಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಕೇರಳ ಮಾದರಿ ಆಸನ ವ್ಯವಸ್ಥೆ ಅಳವಡಿಕೆಗೆ ಮುಂದಾದ ರಾಜ್ಯ ಸರ್ಕಾರ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಇನ್ನು ಮುಂದೆ ಸರ್ಕಾರಿ ಶಾಲೆಗಳಲ್ಲಿ ಬೆಂಚ್‌ಗಳ ಬದಲಿಗೆ ಕೇರಳ ಮಾದರಿಯ ವೃತ್ತಾಕಾರದ ಅಥವಾ ಯು (ಗ) ಆಕಾರದ ಕುಳಿತುಕೊಳ್ಳುವ ವ್ಯವಸ್ಥೆಯನ್ನು ಅಳವಡಿಸಲು ಶಿಕ್ಷಣ ಇಲಾಖೆ ಮುಂದಾಗಿದೆ. ಕೇರಳದ ಮಾದರಿಯು ಈಗಾಗಲೇ ಅಲ್ಲಿನ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸುವಲ್ಲಿ ಯಶಸ್ವಿಯಾಗಿದೆ. ಹೀಗಾಗಿ ಕರ್ನಾಟಕದಲ್ಲೂ ಇದೇ ಮಾದರಿಯನ್ನು ಆಳವಡಿಸಿಕೊಳ್ಳಲು ಶಿಕ್ಷಣ ಇಲಾಖೆ ಮುಂದಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಒಂದು ಪ್ರಮುಖ ಬದಲಾವಣೆಯಾಗಿದೆ. ಇದು ಕಲಿಕೆಯನ್ನು ಕಂಠಪಾಠದ ಬದಲು ಅರ್ಥಪೂರ್ಣ ಸಂವಾದವನ್ನಾಗಿ ಪರಿವರ್ತಿಸಲು ಒಂದು ದಿಟ್ಟ ಹೆಜ್ಜೆಯಾಗಿದೆ. ಈ ಹೊಸ ಮಾದರಿಯು ಮಕ್ಕಳಲ್ಲಿ ಆತವಿಶ್ವಾಸವನ್ನು ಹೆಚ್ಚಿಸುವುದಲ್ಲದೆ, ಅವರಲ್ಲಿ ಅಡಗಿರುವ ಸೃಜನಾತಕತೆ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸಲು ಸಹಕಾರಿಯಾಗುತ್ತದೆ. ಸಾಂಪ್ರದಾಯಿಕ ಸಾಲು-ಸಾಲಿನ ಆಸನ ವ್ಯವಸ್ಥೆಗಿಂತ, ಈ ವಿನ್ಯಾಸವು ವಿದ್ಯಾರ್ಥಿಗಳನ್ನು ಪರಸ್ಪರ ಮುಖಾಮುಖಿಯಾಗಿ ಕೂರಿಸುತ್ತದೆ. ಇದು ವಿದ್ಯಾರ್ಥಿಗಳಲ್ಲಿ ಸಂವಹನ ಕೌಶಲ್ಯವನ್ನು ಹೆಚ್ಚಿಸುತ್ತದೆ ಎಂಬುದು ಶಿಕ್ಷಣ ತಜ್ಞರ ಅಭಿಪ್ರಾಯವಾಗಿದೆ. ಯು ಆಕಾರದ ಆಸನ ವ್ಯವಸ್ಥೆಯಲ್ಲಿ ಶಿಕ್ಷಕರು ತರಗತಿಯ ಕೇಂದ್ರಭಾಗದಲ್ಲಿ ನಿಂತು ಪ್ರತಿಯೊಬ್ಬ ವಿದ್ಯಾರ್ಥಿಯತ್ತ ಗಮನ ಹರಿಸಲು ಸುಲಭವಾಗುತ್ತದೆ. ಇದರಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಅಂತರ ಕಡಿಮೆಯಾಗುತ್ತದೆ. ಈ ವ್ಯವಸ್ಥೆಯು ಗುಂಪು ಚರ್ಚೆ, ಪ್ರಾಜೆಕ್ಟ್ ಕೆಲಸಗಳು ಮತ್ತು ಸಹಪಾಠಿಗಳೊಂದಿಗೆ ಕಲಿಕೆಗೆ ಅತ್ಯುತ್ತಮ ವೇದಿಕೆಯನ್ನು ಒದಗಿಸುತ್ತದೆ. ಬದಲಾದ ಆಸನ ವ್ಯವಸ್ಥೆಯು ತರಗತಿಯ ವಾತಾವರಣವನ್ನು ಹೆಚ್ಚು ಆಕರ್ಷಕ ಮತ್ತು ಜೀವಂತವಾಗಿಸುತ್ತದೆ, ಇದರಿಂದ ವಿದ್ಯಾರ್ಥಿಗಳು ಪಾಠದಲ್ಲಿ ಹೆಚ್ಚು ಆಸಕ್ತಿ ವಹಿಸಲು ಸಾಧ್ಯವಾಗುತ್ತದೆ.

ಎಲ್ಲ ವಿದ್ಯಾರ್ಥಿಗಳೂ ಸಮಾನ ಅಂತರದಲ್ಲಿ ಕುಳಿತುಕೊಳ್ಳುವುದರಿಂದ ತರಗತಿಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಮತ್ತು ಗಮನ ಸಿಗುತ್ತದೆ ಎಂಬ ಭಾವನೆ ಮೂಡುತ್ತದೆ. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಒಬ್ಬರನ್ನೊಬ್ಬರು ಮುಖಾಮುಖಿ ನೋಡಬಲ್ಲರು. ಇದರಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಹಾಗೂ ವಿದ್ಯಾರ್ಥಿಗಳ ನಡುವೆ ಸಂವಹನ ಸುಲಭವಾಗುತ್ತದೆ. ಇದು ಕೇವಲ ಉಪನ್ಯಾಸ ಕೇಳುವ ಪದ್ಧತಿಯನ್ನು ಬದಲಿಸಿ, ತರಗತಿಯಲ್ಲಿ ಚರ್ಚೆಗಳು, ಗುಂಪು ಕೆಲಸಗಳು ಮತ್ತು ವಿಚಾರ ವಿನಿಮಯ ಹೆಚ್ಚಾಗಲು ನೆರವಾಗುತ್ತದೆ. ಶಿಕ್ಷಕರು ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಸುಲಭವಾಗಿ ಗಮನಿಸಬಹುದು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೂ ತಲುಪಲು ಸಾಧ್ಯವಾಗುತ್ತದೆ.

**ಸಮಾನತೆಯ ಭಾವ :**

ಸಾಂಪ್ರದಾಯಿಕ ಸಾಲು ಸಾಲು ಬೆಂಚ್‌ಗಳ ವ್ಯವಸ್ಥೆಗಿಂತ, ಈ ಪದ್ಧತಿಯು ವಿದ್ಯಾರ್ಥಿಗಳಲ್ಲಿ ಸಮಾನತೆಯ ಮತ್ತು ಸಮುದಾಯದ ಭಾವನೆಯನ್ನು ಮೂಡಿಸುತ್ತದೆ.



**ಶಿಕ್ಷಕ-ವಿದ್ಯಾರ್ಥಿ ಸಂಬಂಧ :**

ಯು ಆಕಾರದ ಆಸನ ವ್ಯವಸ್ಥೆಯಲ್ಲಿ ಶಿಕ್ಷಕರು ತರಗತಿಯ ಕೇಂದ್ರ ಬಿಂದುವಾಗಿರದೆ, ಸುಗಮಕಾರರಾಗಿ ಕಾರ್ಯ ನಿರ್ವಹಿಸಲು ಸುಲಭವಾಗುತ್ತದೆ. ಇದು ಶಿಕ್ಷಕರು ಪ್ರತಿಯೊಬ್ಬ ವಿದ್ಯಾರ್ಥಿಯೊಂದಿಗೆ ವೈಯಕ್ತಿಕವಾಗಿ ಸಂಪರ್ಕ ಸಾಧಿಸಲು ಸಹಾಯ ಮಾಡುತ್ತದೆ ಎಂದು ಶಿಕ್ಷಕರು ಭಾವಿಸಿದ್ದಾರೆ.

**ಸಮಾನತೆ ಮತ್ತು ಒಳಗೊಳ್ಳುವಿಕೆ :**

ಬೆಂಚ್‌ಗಳ ಮೇಲಿನ ಶ್ರೇಣೀಕೃತವಾಗಿ ಕುಳಿತುಕೊಳ್ಳುವ ವ್ಯವಸ್ಥೆ ಹೋಗಲಾಡಿಸಿ, ಎಲ್ಲರೂ ಸಮಾನ ಎತ್ತರದಲ್ಲಿ ಮತ್ತು ಒಂದೇ ವೃತ್ತದ ಆಕಾರಲ್ಲಿ ಕುಳಿತುಕೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡುತ್ತದೆ.

**ಸೃಜನಾತಕ ಕಲಿಕಾ ವಾತಾವರಣ :**

ತರಗತಿಯನ್ನು ಕೇವಲ ಪಾಠ ಕೇಳುವ ಸ್ಥಳವನ್ನಾಗಿ ಮಾಡದೆ, ಅದನ್ನು ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಲು ಈ ವ್ಯವಸ್ಥೆ ಹೆಚ್ಚು ಸಹಕಾರಿಯಾಗಿದೆ. ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿರುವ ತರಗತಿಗಳಲ್ಲಿ ವೃತ್ತಾಕಾರದ ವ್ಯವಸ್ಥೆಯನ್ನು ಅಳವಡಿಸುವುದು ಕಠಿಣವಾಗಬಹುದು. ಇದಕ್ಕೆ ತರಗತಿಯ ಸ್ಥಳಾವಕಾಶದ ಮರು ವಿನ್ಯಾಸದ ಅಗತ್ಯವಿರುತ್ತದೆ. ಈ ವ್ಯವಸ್ಥೆಯಲ್ಲಿ ಪಾಠ ಬೋಧನೆ ಮಾಡುವ ವಿಧಾನ ಬದಲಾಗಬೇಕಾಗುತ್ತದೆ. ಶಿಕ್ಷಕರಿಗೆ ಹೊಸ ಬೋಧನಾ ತಂತ್ರಗಳ ಕುರಿತು ತರಬೇತಿ ನೀಡುವುದು ಅತ್ಯಗತ್ಯ. ಈಗಾಗಲೇ ಇರುವ ಬೆಂಚ್‌ಗಳನ್ನು ಬದಲಾಯಿಸುವುದು ಅಥವಾ ಪೀಠೋಪಕರಣಗಳ ಮರು ಹೊಂದಾಣಿಕೆ ಮಾಡುವಾಗ ಆರ್ಥಿಕ ಮತ್ತು ನಿರ್ವಹಣಾ ಸವಾಲುಗಳು ಎದುರಾಗಬಹುದು.

# ಐವರು ಕಾಂಗ್ರೆಸ್ ಸ್ಪರ್ಧೆಗಿಳ ಅಭ್ಯರ್ಥಿಗಳ ಸ್ಪರ್ಧೆ ಹಿನ್ನೆಲೆಯಲ್ಲಿ ಪರಿಷತ್‌ನ 7 ಸ್ಥಾನಗಳಿಗೆ ಮತದಾನ ಅನಿವಾರ್ಯ

ಬೆಂಗಳೂರು: ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸದಸ್ಯ ಸ್ಥಾನಗಳಿಗೆ ಮತದಾನ ನಡೆಯುವುದು ಅನಿವಾರ್ಯವಾಗಲಿದೆ. ಐವರು ಅಭ್ಯರ್ಥಿಗಳನ್ನು ಕಾಂಗ್ರೆಸ್ ಸ್ಪರ್ಧೆಗಿಳಿಸಿರುವ ಹಿನ್ನೆಲೆಯಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ನಡುವೆ ತೀವ್ರ ಪೈಪೋಟಿ ಏರ್ಪಡುವ ಸಾಧ್ಯತೆಗಳು ಸ್ಪಷ್ಟವಾಗಿವೆ.

ಜೂ.18ರಂದು ಮೇಲನೆ ಚುನಾವಣೆಗೆ ಮತದಾನ ನಡೆಯುವುದು ಖಾತ್ರಿಯಾಗಲಿದೆ. ಆದರೆ ರಾಜ್ಯಸಭೆ ಚುನಾವಣೆಗೆ ಹೆಚ್ಚುವರಿ ಅಭ್ಯರ್ಥಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯಾಗುತ್ತಿದೆ. ವಿಧಾನಪರಿಷತ್ ಚುನಾವಣೆಯಲ್ಲಿ ಗೌಪ್ಯ ಮತದಾನ ನಡೆಯುವುದರಿಂದ ಅಡ್ಡ ಮತದಾನ ನಡೆಯುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಜೆಡಿ-ಎಸ್ ಮತ್ತು ಕಾಂಗ್ರೆಸ್ ನಡುವೆ ಒಂದು ಸ್ಥಾನದ ಗೆಲುವಿಗಾಗಿ ತೀವ್ರ ಪೈಪೋಟಿ ಉಂಟಾಗುವುದರಿಂದ ಶಾಸಕರಿಗೆ ಭಾರೀ ಬೇಡಿಕೆ ಉಂಟಾಗಲಿದೆ. ಒಂದು ವೇಳೆ ರಾಜ್ಯಸಭೆ ಚುನಾವಣೆಯಂತೆ ಕಾಂಗ್ರೆಸ್ 5ನೇ ಅಭ್ಯರ್ಥಿಯನ್ನು ಕಣಕ್ಕಿಳಿಸದಿದ್ದರೆ



ಮೂರು ಪಕ್ಷಗಳ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುತ್ತಿದ್ದರು.

ಮತದಾನ ಅನಿವಾರ್ಯವಾಗಿರುವುದರಿಂದ ಮೂರೂ ಪಕ್ಷಗಳಲ್ಲಿ ತಮ ತಮ ಅಭ್ಯರ್ಥಿಗಳ ಗೆಲುವಿಗೆ ಚುನಾವಣಾ ತಂತ್ರಗಾರಿಕೆಗಳು ರೂಪಿಸಲಾಗುತ್ತದೆ. ಜೊತೆಗೆ ತಮ ಶಾಸಕರ ಮತಗಳು ಬೇರೆ ಪಕ್ಷದ ಅಭ್ಯರ್ಥಿಗಳಿಗೆ ದೊರೆಯಂತೆ ಮಾಡಲು ವಿಪ್ ನೀಡುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಗಳಿವೆ. ವಿಧಾನಸಭೆಯಲ್ಲಿ ಕಾಂಗ್ರೆಸ್ ಹೊಂದಿರುವ ಶಾಸಕರ ಸಂಖ್ಯಾಬಲದ ಆಧಾರದ ಮೇಲೆ 4 ಸ್ಥಾನ ಹಾಗೂ ಬಿಜೆಪಿ ಹೊಂದಿರುವ ಶಾಸಕರ ಸಂಖ್ಯಾ ಬಲದ ಆಧಾರದ ಮೇಲೆ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದೆ. ಆದರೆ ಜೆಡಿಎಸ್ 18 ಶಾಸಕರನ್ನು ಹೊಂದಿರುವುದರಿಂದ ಸುಲಭವಾಗಿ ಗೆಲ್ಲಲು ಸಾಧ್ಯವಾಗುವುದಿಲ್ಲ. ಬಿಜೆಪಿಯ ಹೆಚ್ಚುವರಿ ಮತಗಳನ್ನು ಪಡೆದರೂ ಗೆಲುವಿನ ದಡ ಸೇರುವುದು ಕಷ್ಟವಾಗಲಿದೆ. ಆದರೆ ಕಾಂಗ್ರೆಸ್ ಕೂಡ 5ನೇ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಿದೆ. ಈ ಅಭ್ಯರ್ಥಿಯ ಗೆಲುವು ಸುಲಭವಲ್ಲ. ಹೀಗಾಗಿ ಕಾಂಗ್ರೆಸ್ ಮತ್ತು ಜೆಡಿ-ಎಸ್ ಅಭ್ಯರ್ಥಿಗಳ ನಡುವೆ ತೀವ್ರ ಹಣಾಹಣಿ ಏರ್ಪಡುವ ಸಾಧ್ಯತೆಗಳು ಗೋಚರಿಸುತ್ತಿವೆ.

ನಾಳೆ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು , ಜೂ.11ರಂದು ನಾಮಪತ್ರ ವಾಪಸ್ ಪಡೆಯಲು ಕಡೆಯ ದಿನವಾಗಿದ್ದು ಅಂದು ಅಂತಿಮ ಕಣದಲ್ಲಿ ಉಳಿಯುವ ಅಭ್ಯರ್ಥಿಗಳನ್ನು ಪ್ರಕಟಿಸಲಾಗುತ್ತದೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿ ಉಮೇದುವಾರಿಕೆ ಹಿಂಪಡೆಯದಿದ್ದರೆ ಜೂ.18ರಂದು ಮತದಾನ ನಡೆದು ಅಂದು ಸಂಜೆ ಲಿತಾಂಶ ಪ್ರಕಟವಾಗಲಿದೆ. ಕಾಂಗ್ರೆಸ್ ಅಭ್ಯರ್ಥಿಗಳಾಗಿ ತಿಪ್ಪಣ್ಣಪ್ಪ ಕನಕನೂರು, ಪಿ.ವಿ.ಮೋಹನ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಶಿವಣ್ಣ.ಬಿ.ಎಸ್ ಹಾಗೂ ವಿನಯ್ ಕಾರ್ತಿಕ್ ಉಮೇದುವಾರಿಕೆ ಸಲ್ಲಿಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜ್ ಅವರು ಚುನಾವಣಾ ಸ್ಪರ್ಧೆಗಿಳಿದಿದ್ದಾರೆ. ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾದ ಇಂದು ಕಾಂಗ್ರೆಸ್ ಅಭ್ಯರ್ಥಿ ವಿನಯ್ ಕಾರ್ತಿಕ್, ಬಿಜೆಪಿ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜ್ ಅವರು ಇಂದು ತಮ ಉಮೇದುವಾರಿಕೆಯನ್ನು ಸಲ್ಲಿಸಿದರು.

ವಿಧಾನ ಪರಿಷತ್ ಸದಸ್ಯರಾದ ಗೋವಿಂದರಾಜು, ನಸೀರ್ ಅಹದ್, ಎಂ.ಟಿ.ಬಿ.ನಾಗರಾಜು, ಪ್ರತಾಪಸಿಂಹ ನಾಯಕ್ ಕೆ., ತಿಪ್ಪಣ್ಣಪ್ಪ, ಸುನೀಲ್ ವಲ್ಯಾಪುರ್, ಬಿ.ಕೆ. ಹರಿಪ್ರಸಾದ್ ಅವರು ಜೂ.30ರಂದು ನಿವೃತ್ತಿಯಾಗಲಿದ್ದಾರೆ. ಇವರ ನಿವೃತ್ತಿಯಿಂದ ತೆರವಾಗುವ ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಸದಸ್ಯ ಸ್ಥಾನಗಳ ಆಯ್ಕೆಗೆ ಭಾರತದ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101.
Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101.